9657

158 1691

ಪುಸ್ತಕವನ್ನು ಈ ವಿಭಾಗದಿಂದ
ಹೊರಗೆ ಒಯ್ಯತಕ್ಕದ್ದಲ್ಲ

ಉ.ಪಯಶಾಗ.

ಪುಸ್ತಕದಲ್ಲಿ ಗುರುತು ಹಾಕತಕ್ಕದ್ದಲ್ಲ

ಕನ್ನಡ ಸಂಶೋಧನ ವಿಭಾಗ
ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ, ಬೆಂಗಳೂರು-೧೮

ACC -1691

Digitized by ROJA MUTHIAH RESEARCH LIBRARY

9657

ಕನ್ನಡ ಸಂಶೋಧನ ವಿಭಾಗ
ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ, ಬೆಂಗಳೂರು-೧೮

ಪುಸ್ತಕದಲ್ಲಿ ಗುರುತು ಹಾಕತಕ್ಕದ್ದಲ್ಲ

Digitized by ROJA MUTHIAH RESEARCH LIBRARY

9657 LIBRARY.

1691

ಶ್ರೀರಸ್ತು

ಲಕ್ಷ್ಮೀನರಸಿಂಹಪ್ರಸನ್ನ

# ಉದಯರಾಗ

ಪಂಡಿತರಿಂದ ಪರಿಶೋಧಿಸಲ್ಪಟ್ಟು.

ಮೊದಲನೇ ಛಾಪೆ (೧೦೦೦) ಪ್ರತಿಗಳು

ಮೈಸೂರು
ಲಕ್ಷ್ಮೀನರಸಿಂಹ ಮುದ್ರಾಶಾಲೆಯೊಳ್
ಮುದ್ರಿಸಿ ಪ್ರಕಟಸಲ್ಪಟ್ಟಿತು

೧೮೮೯.

Digitized by ROJA MUTHIAH RESEARCH LIBRARY

9657

ಪರಾಮರ್ಶನ ಗ್ರಂಥ



ಶ್ರೀರಸ್ತು

## * ಉದಯರಾಗ *

ಭಯನಿವಾರಣವುಶ್ರೀಹರಿಯನಾಮಾ । ಜಯಪಾಂಡುರಂಗವಿಠಲನಿಮ್ಮನಾಮ
॥ಪ॥ ಧಾರುಣೀದೇವಿಗಾಧಾರವಾಗಿಹನಾಮ । ನಾರದರುನಲಿನಲಿದುನೆನೆವನಾಮ ।
ಘೋರಪಾತಕದಜಾಮಿಳನಸಲಹಿದನಾಮ । ತಾರಕಬ್ರಹ್ಮವಲ್ಲವೆನಿಮ್ಮನಾಮ ॥
ಮೊರೆಯಾಲಿಸಿಮುನ್ನಜಗವಸಲಹಿದನಾಮ।ಕರುಣದಿಂದ ದ್ರೌಪದಿಯಕಾಯ್ದ
ನಾಮ । ಮರುಗುತಿಹಧೃವನವ್ರುನ್ನತವಮಾಡಿದನಾಮ । ಪರಕೆಪರತತ್ವವಲ್ಲವೆನಿ
ಮ್ಮನಾಮ॥ ಭಯನಿವಾರಣವುಶ್ರೀಹರಿಯನಾಮ॥೧॥ಚಂದ್ರಶೇಖರಗಿರಿಜೆಶರಣು
ಶರಣೆಂಬೊನಾಮ । ಬಂದವಿಭೀಷಣನಕಾಯ್ದನಾಮ॥ಕಂದಮುಚುಕುಂದನಿಗೆಕಾ
ಮಿತವನಿತ್ತನಾಮ । ಹೊಂದಿದಾಭಕ್ತರಿಗೆಸಲಹುವದಿವ್ಯನಾಮ । ಭಯನಿವಾರ
ಣವು॥೨॥ ಚರಣದಲಿಅಹಲ್ಯೆಯನುಶರೆಯಬಿಡಿಸಿದನಾಮ । ತರಳಪ್ರಹ್ಲಾದನ
ನುಕಾಯ್ದನಾಮ ।ಭರದೊಳಕ್ರೂರನಿಗೆನಿಜವತೋರಿದನಾಮ। ಧುರದೊಳಗೆಮ
ಲ್ಲರನುಮುರಿದನಾಮ ॥೩॥ಚಾರುಸತಿತುಲಶಿಯೊಳುಕರುಣವಾಂತಿಹನಾಮ । ದ್ವಾ
ರಕಾಮಧ್ಯದಲಿನೆಲಸಿರ್ದನಾಮ । ಕ್ಷೀರಸಾಗರದಲ್ಲಿಶಯನವಾಗಿಹನಾಮ । ಧಾರಾ
ಣಿಯೊಳಧಿಕವಲ್ಲವೆನಿಮ್ಮನಾಮಾ॥ಭಯನಿವಾ॥೪॥ಕಡಹದಮರನೇರಿಮಡುವದು
ಮುಕಿದನಾಮ ।ಹೆಡೆಯಕಾಳಿಂಗನನತುಳಿದನಾಮ॥ ಮಡದಿಯರಿಗೊಲಿದುಪಾವನ
ವಮಾಡಿದನಾಮ ।ಪರಕೆಪರತತ್ವವಲ್ಲವೆನಿಮ್ಮನಾಮ ಭ॥೫॥ಭಕ್ತಿಯಲಿನೆನೆವರ್ಗೆ
ಯೆತ್ತಿಸಲಹುವನಾಮ ।ಮುಕ್ತಿಮಾರ್ಗಕೆಯೋಗ್ಯಶ್ರೀಹರಿಯನಾಮ।ಯುಕ್ತಿ
ಯಲಿದುಷ್ಟರನುನಾಶಪಡಿಸಿದನಾಮ । ಚಿತ್ತಜನಪಿತ್ತಶ್ರೀನರಹರಿಯನಾಮಾ ।
ಭಯನಿವಾರಣವು॥೬॥ನಂಬಿದಾಭಕ್ತರನುಬಂದುಸಲಹುವನಾಮ । ತಂದುಅಮೃತ
ವಸುರರಿಗೆರೆದನಾಮಾ ॥ಮಂದರವನೆತ್ತಿಗೋಕುಲವಸಲಹಿದನಾಮ ।ಕಂದಧೃವನಿ
ಗೆವರವಕರುಣಿಸಿದನಾಮ॥೭॥ಪರಿಪರಿಯಭಕ್ತರನುಪಾಲಿಸುತ್ತಿಹನಾಮ ।ಪರಮ
ಮಂಗಳವೆನಿಪನಿಮ್ಮನಾಮ । ಹರನುಬ್ರಹ್ಮಾದಿಗಳುಸ್ಮರಣೆಮಾಡಿದನಾಮ ।
ಗರುಡವಾಹನದೇವನಿಮ್ಮನಾಮ॥೮॥ಅಖಿಳವೇದಪುರಾಣಅರಸಿಕಾಣದನಾಮ ।
ಸಕಲಯೋಗೀಜನಕೆಸೌಖ್ಯನಾಮಾ ॥ ಪ್ರಕಟಸಲುಜಗಪಾವನವಮಾಡಿದನಾ
ಮ । ರುಕ್ಮಿಣೀಅರಸವಿಠ್ಠಲನಿಮ್ಮನಾಮ । ಭಯನಿವಾರಣವುಶ್ರೀಹರಿಯ॥೯॥

Digitized by ROJA MUTHIAH RESEARCH LIBRARY

## ದ್ರೌಪದಿವಸ್ತ್ರಾಪಹಾರದ ಉದಯರಾಗ

ವಾಸುದೇವಾಯನ್ನಮೋ | ವಾಸುಕೀಶಯನಾಯ | ವ್ಯಾಸವಾದ್ಯಖಿಳಮುನಿ
ನಮಿತಚರಣಾಂಭೋಜ | ಭೂಸುರಪ್ರಿಯಭಕ್ತಪೋಷಕನೆರಕ್ಷಿಪುದು |ಕೇಶವ
ಮುಕುಂದನೊಲಿದು | ಹರಿಯೆ ||ಪ||ಶುಂಡಾಲಪುರದೊಳಗೆದುರುಳದುರ್ಯೋಧನ
ನು | ಪಾಂಡುನಂದನರೊಡನೆಕಪಟದ್ಯೂತವನಾಡಿ | ಗಂಡರೈವರಮುಂದೆ ದ್ರುಪ
ದಸುತೆಯಳಕರಗಲಂಡದುಶ್ಯಾಸನಪಿಡಿದು | ಅಂಡಳೆದುಶೀರೆಯನುಶೆಳೆಯುತಿರೆದ್ರೌ
ಪದಿಯು | ಕಂಡುಮನದಲಿಬೆದರಿಪರಮಾತ್ಮಪರಿಪೂರ್ಣ | ಪುಂಡರೀಕಾಕ್ಷರಕ್ಷಿ
ಪುದೆಂದುಮೊರೆಯಿಟ್ಟ | ಳುಂಡಚತುರಂಗಕಾಗ ||೧|| ಪಾವಕನಪುರಿಯೊಳಗೆಹೊ
ಕ್ಕುಹೊರಡಲಿಬಹುದು | ಹಾವಿನಾಹಕೆತೆಹಿಡಿದುಯೆಳದೆಳದಾತರಬಹುದು | ತೀ
ವಿರ್ದಮಡುವಧುಮುಕಲಿಬಹುದು | ಗರಳವನುಸೇವಿಸಬಹುದುಧಾರಕೆ||ಸಾವಿಗಂ
ಜದೆಕೊರಳನುತ್ತರಿಸಿಕೊಳ್ಳಬಹುದು | ಜೀವಯಿದ್ದಂತೆಲಜ್ಜೆಯತೊರೆಯಲಾರೆ
ನಿಂ | ನಾವಪರಿಯಲಿನಿನ್ನನಂಬಿರುವನಾಥೆಯನುದೇವಅಭಿಮಾನಕಾಯೊ ||೨||
ಪತಿಗಳೈವರುಸತ್ಯವ್ರತದಿಸುಮ್ಮನೆಯಿಹರು | ಅತಿಕ್ಲೇಶಪಡುತಿಹರುವಿದುರಭೀ
ಷ್ಮಾದಿಗಳು | ಸುತರಮೇಲಣಮೋಹದಿಂದಂಜಿಹೇಳದಿಹ | ಗತವಿಲೋಚನಮಾ
ವನು ||ಕೃತಕಾಗ್ನಿಕರಶಕುನಿಕರ್ಣದುರಿಯೋಧನರು | ಹಿತವಬಯಸುವರಿಲ್ಲನೆರ
ದಿರ್ದಸಭೆಯೊಳಗೆ | ಗತಿಯಿಲ್ಲದವರ್ಗೆಸದ್ಗತಿನೀನೆನಂಬಿದೆನುರತಿಪತಿಯಪಿತನೆಸ
ಲಹೊ||೩||ಅತ್ತೆಯಲ್ಲವೆಯುವನಗೆಗಾಂಧಾರಿದೇವಿನೀ | ವೃತ್ತ್ಯಾನಂತೆಳೆವವನಬಿಡಿಸ
ಬಾರದೆತಾಯೆ | ಉತ್ತಮೆಯಭಾನೀನುಭಾನುಮತಿಯಲೆಹೆಣ್ಣೆ | ಚಿತ್ತದಯ
ಮಾಡಿನೋಡೆ ||ಸುತ್ತನೆರದಿಹಸಭೆಯಪರಿವಾರದವರೆಲ್ಲ | ಹೆತ್ತದಿಲ್ಲವೆಯನ್ನಪ್ರೋ
ಢ್ಯಪೆಣ್ಮಕ್ಕಳನು | ಹತ್ತರೊಳಗೆಬಿದ್ದಹಾವುಸಾಯಲಿಬಹುದೆತಕ್ವಬಾಹಿರರಾದಿ
ರಿ ||೪|| ಅರಿಗೊರಲಿದರೆನ್ನದೂರಕೇಳ ಪರಿಲ್ಲ | ಪಾರಗಾಣಿಸುವವರಕಾಣೆನಾನಿದ
ರೊಳಗೆ | ಸಾರಿದರಪ್ರೇರೆಪಕಂಸಾರಿನೀನಲ್ಲದನ್ಯಾರೆನಗೆಆಪ್ತಬಂಧು || ಪಾರಿದರು
ಧರ್ಮದೇವತೆಗೆನ್ನವಲ್ಲಭರು| ಭಾರನಿನ್ನದುಯೆಂದುನಂಬಿದಯನಾಥಳನು | ಕ್ಷೀರ
ಧೊಳಗದ್ದು ನೀರೊಳಗದ್ದು ಗತಿನೀನೆನಾರಾಯಣನೆರಕ್ಷಿಸೂ ||೫|| ಅಸುರಜನ್ನ
ಟ್ಟಬರೆಪಶುಪತಿಯರಕ್ಷಿಸಿದೆ | ಋಷಿಯಶಾಪವತರಿಯುತ ಬರಿಜನಪ್ರೋದೆ |
ವಸುಧೆಂತೊಳಶಿಲೆಯಾಗಿಬಿದ್ದಅಹಲ್ಯೆಯಕಾಯ್ದೆ| ಶಿಶುಪ್ರಹಲ್ಲಾದಗೊಲಿದೆ ||
ವಸುಳೆಧ್ರುವರಾಯನಿಗೆಹೆಸರುಳ್ಳಪದವಿತ್ತೆ | ದಶಕಂಠನನುಜಂಗೆಸ್ಥಿರರಾಜ್ಯವನು
ಕೊಟ್ಟೆ | ಪೆಸರುಗೊಂಡಡೆಪಸುಳೆಯಜಮಿಳನರಕ್ಷಿಸಿದೆವಸುದೇವಸುತನೆಸಲ
ಹೈ ||೬|| ಲಕ್ಷ್ಮೀಮನೋಹರನೆಯಿಕ್ಷುಚಾಪನಪಿತನೆ | ಯಕ್ಷಗಂಧರ್ವಪಾಲೀಂ



ದ್ರಮುನಿವಂದಿತನೆ | ಅಕ್ಷಯಸುಲೀಲೆಯಲಿಜಗವಸೃಜಿಸುತಸ್ಥೂಲಸೂಕ್ಷ್ಮ
ದೊಳಗನುಚರಿಪನೆ || ಕುಕ್ಷಿಯೊಳಗೀರೇಳುಭುವನಪಾಲಿಸುತಿಹನೆ | ಅಕ್ಷಯ
ಅಸುರಾಂತಕನೆಅಜನಪಿತಪರಿಪೂರ್ಣ | ದಕ್ಷಸುತೆಪತಿಸಖನೆಪಕ್ಷಿವಾಹನಸ್ವಾ
ಮಿರಕ್ಷಿಸುಅನಾಥಬಂಧು || ತಂದೆತಾಯಿಯುನೀನೆಬಂಧುಬಳಗವುನೀನೆ | ಯಿಂದೆ
ನ್ನಕುಲಸ್ವಾಮಿಗುರುಪಿತಾಮಹನೀನೆ | ಯೆಂದುನಂಬಿದೆಯನ್ನಮಾನಾಭಿಮಾ
ನಗೋವಿಂದನಿನಗೊಪ್ಪಿಸಿದೆನು || ಸಂದೇಹವ್ಯಾಕಿನ್ನುಕೊಲ್ಲುಕಾಯೊನೀನು |
ಯೊಂದೆರಡುಕಂಗಳುಮುಚ್ಚಿಕರಗಳಮುಗಿದು | ನಿಂದುಪ್ರಾಣವಬಿಡುವೆನೆಂದು
ನಿಶ್ಚೈಸಿ | ಗೋವಿಂದಯೆಂದೊದರೆತರಳೆ ||೭|| ಇಂತೆನುತದ್ರೌಪದಿಯುಮೊರೆ
ಯಿಡುವಧ್ವನಿಕೇಳಿ | ಅಂತರಾತ್ಮಕಕೃಷ್ಣದ್ವಾರಕಾಪುರದೊಳಗೆ |ಕಾಂತೆರುಕ್ಮಿ
ಣಿಸತ್ಯಭಾಮೆಯರಕೂಡೆ | ಏಕಾಂತಭವನವೊಳಿದ್ದನು||ಕುಂತಿನಂದನರಸತಿಉ
ಟ್ಟದಕ್ಷಯವಾಗಿ |ಸಂತಸವಗೊಳಲೆಂದುವರವಿತ್ತಶ್ರೀಕೃಷ್ಣ | ಯಿಂತುಟೋ
ಹರಿಯನೆಸವನಮೋಘಕರುಣಗಳನಂತವಸ್ತ್ರಗಳಾದವು||೮|| ಶೆಳೆಯುತಿದ್ದನುಖ
ಳನುಬೆಳೆಯುತಿರ್ದುದುಶೀರೆ |ಬಿಳಿದುಪ್ರೊಬಟ್ಟೆನಾನಾವಿಚಿತ್ರದಬಣ್ಣ |ಹೊಳೆ
ಲುತುಂಬುವತೆರದಿಯೆಳದೆಳವುಮಹಾತ್ಮಬಳಲುತಿಳೆಯೊಳುಬಿದ್ದನು || ಕಳೆಯು
ಗುಂದಿತುಮೋರೆಕರ್ಣದುರ್ಯೋಧನರು | ಬಳಿಯನಿಂತಿರ್ದದೂತರಕರದುಸೇವಿಸಿ
ದ | ಶಳವುತಿಹವಸ್ತ್ರಗಳುಹುಬೊಕ್ಕಸಕೆನಲುನಳನಾಕ್ಷಿತಿಳಿವಳಾಗ ||
ಶಿಟ್ಟನಲಿದ್ರೌಪದಿಯುಕಣ್ದೆರದುನೋಡಿದಳು | ಬೆಟ್ಟದಂತೊಟ್ಟಿರ್ದವಸ್ತ್ರ
ರಾಶಿಗಳೆಲ್ಲ | ಸುಟ್ಟಗ್ನಿಹೊರಸೂಸಿಪಟ್ಟಣದಗೃಹವೆ | ನೆಟ್ಟನಾಹುತಿಗೊಂಡ
ವು||ಕೊಟ್ಟಳಾಕಮಲಾಕ್ಷಿಕುರುಪತಿಗೆಶಾಪವನು|ಕಟ್ಟಾಳಭೀಮಸೇನನುರಣದಿ
ಗಧೆಯಿಂದ | ಕುಟ್ಟಿಬಸುಡಲಿಯಿವನತೊಡೆಗಳೆರಡನುಯೆಂದು | ಯಿಟ್ಟನುಡಿಗ
ನೃತವುಂಟೆ||೧೦||ಮೂಡಿದವುಪ್ರತಿಸೂರ್ಯಧೂಮಕೇತುಗಳುಪ್ರೋ | ಡ್ಯಾಡಿದವು
ಗಗನದೊಳ್ಪದ್ದುಕೂ | ಗ್ಯಾಡಿದವುಗಡಗಡನೆಗುಡುಗಿಶ್ರಾಗವನಿಮೊತಾಡಿದುದು
ಶಿಖಿಯುಪ್ರಭೆ || ಕೂತೆನಕ್ಷತ್ರಗಳುಸೂಸಿದವುನಭದಿಂದಲಾಡಿತಾಗಶರೀರವಾ
ಕ್ಯಗಳುಬಹಳಪರಿ | ಕೇಡುಕೌರವಗಾಗದಿರದೆಂದುನಿಶ್ಚಯವಮಾಡಿಪ್ರೋಕ್ಕರುಮ
ಸೆಂತೊಳು||೧೨||ಹರುಷವಟ್ಟರುಮನದಿವಿದುರಭೀಷ್ಮಾದಿಗಳು |ಸುರರುನಾರದ
ಮುಗಳುನೆರದರಂಬರವಲ್ಲಿ |ಹರಿಜಯಜಯವೆಂದುದ್ರೌಪದಿಯಶಿರಿಮುಡಿಗೆ|ಸು
ರಿಸಿದರುಪುಷ್ಪಮಳೆಗಳಾ ||ಹರಿಯನಾಮವೊಳಿಯುಪ್ರೊಗಳುತಲಿದ್ವಿಜೇಂದ್ರತಿರುಗಿಹೊ
ಕ್ಕನುತನ್ನಪಟ್ಟಣದೊಳಿರಮನೆಯ |ಹರಿಯನೆನೆಯುವರೇಸುಧನ್ಯರೊ |ದ್ರೌ
ಪದಿಗೆಹರಿಯನಾಮವೆಕಾಯ್ದುದು ||೧೩|| ಆವನಿದನುದಯಕಾಲದೊಳೆದ್ದುಭಕ್ತಿ

Digitized by ROJA MUTHIAH RESEARCH LIBRARY

ಯಲಿ । ಭಾವಶುದ್ಧಿಯಲಿ ಭಜನೆಯ ಮಾಳ್ಪ ಸುಜನರ್ಗೆ । ಸಾವಿರಜನ್ಮದ ಸಂಚಿತಾರ್ಥದ ಪಾಪ ತಾನೆ ಹತವಾಹುದೆಂದೂ ॥ ಶ್ರೀವಾಸುದೇವನಾಜ್ಞಾಪಿಸಿದ ರುಕ್ಮಿಣಿಗೆ । ದೇವಕಿ ಕೇಳೆನ್ನ ಭಾಷೆಯ ಮುಂದೆಯರ್ಜುನಗೆ । ನಾನೆ ಸಾರಥಿಯಾಗಿ ಸಲಹುವೆನು ; ಅವರೆನ್ನ ಜೀವಪ್ರಾಣವರೆಂದನೂ ಹರಿಯು ॥೧೪॥ ಮಂಗಳಂ ಶ್ರೀಧರಗೆ । ಮಂಗಳಂ ಭೂಧರಗೆ । ಮಂಗಳಂ ಮುರಹರಗೆ ಮಂಗಳಂ ನರಹರಿಗೆ ಮಂಗಳಂ ಗರುಡವಾಹನ ಕೃಷ್ಣದೇವಂಗೆ ಮಂಗಳಂ ಕರಿವರದಗೆ ॥ ಮಂಗಳಂ ತರಳೆಯಭಿಮಾನವನು ಕಾಯ್ದಂಗೆ । ಮಂಗಳಂ ಮುನಿಜನರ ಮಾನವ ಕೊನೆಯಲ್ಲಿ ಕಾಹಗೆ । ಮಂಗಳಂ ಕಾಡಿಸಿಲಯ ವಾವಿಕೇಶವಗೆ ಸರಿಗೆ ಜಯ ಮಂಗಳಂ ॥ ಹರಿಯೆ ವಾಸುದೇವಾಯನ್ನ ಮೊ ॥

ಉದಯರಾಗ

ಏಳು ನಾರಾಯಣನೆ ಯೇಳು ಲಕ್ಷ್ಮೀರಮಣ । ಯೇಳು ಪುರಗಾದ್ರಿ ಶ್ರೀವೇಂಕಟೇಶಾ । ಯೇಳಯ್ಯ ಬೆಳಗಾಯಿತು ॥ ಪಲ್ಲವಿ ॥ ಭೂಸುರರುಗಳು ಬಂದು ಬಾಗಿಲಲಿ ನಿಂದಿಹರು । ವಾಸುದೇವನೆ ನಿನ್ನ ನಾಮವನು ಪೊಗಳುತಲಿ । ಶೇಷಶಯನನೆಯೇಳು ತಾಸಮುದ್ರ ಮಥನೆ । ಲೇಸಿನಿಂ ಮಾಡುದೆಶೆಕೆಂಪಾಯ್ತು ವಲಿದುಪವಡಿಸದೆ ॥೧॥ ಅರಳುಮಲ್ಲಿಗೆ ಜಾಜಿ ಪರಿಮಳದ ಪುಷ್ಪವನು । ಸುರರು ತಂದು ರೆನಿನ್ನ ಭರವನರೈಸುವರು । ಸರಸಿಜೋದ್ಭವ ಪಿತನೆ ಕರುಣದಿಂ ಸಜ್ಜನರ । ಪೊರೆಯೆ ನುತ್ತರ ಹರಿಯನೆಬ್ಬಿಸಿದಳು ಏಳಯ್ಯ ಬೆಳಗಾಯಿತು ॥೨॥ ತುಂಬುರರು ನಾರದರು ರಂಭೆ ಪೂರ್ವಶಿಯರು । ಜಂಭವೈರಿಯು ಸಹಿತ ವೋಲಗವ ಕೊಡುತಿಹರು । ಅಂಬುಜನಾಭ ಶ್ರೀಪುರಂದರವಿಟ್ಠಲನ । ಸಂಭ್ರಮದಿ ಗೋಪಿ ತಾನೆಬ್ಬಿಸಿದಳು ಏಳಯ್ಯ ॥೩॥

ಉದಯರಾಗ

ಮಗುವ ತಪ್ಪಿರ ಬಾರದೇ ಮಾನಿನಿಯರೂ । ಸುಗುಣ ಚನ್ನಿಗನೆಂಬ ಸೊಬಗುಳ್ಳ ಮಗುವಾ ॥ಪ॥ ನೀರೊಳಗೆ ಪೊಕ್ಕುತಾ । ಬೇರು ತಿದೆ ಮಾತುಗಳ । ಧಾರುಣೀತಳ ತಿಳಿದು ಬಾರದಿದಕೊ । ಘೋರವಾತಕವೆಂಬ ಬೇರ ಮೆಲ್ಲುತಲಿದಕೊ । ಬಾರ್ಯ್ಯಯೆನೆ ಕೋಪವ ಮೀರುತಿಹ ಮಗುವ ॥೧॥ ನೀಡುತಿದೆ ಪಾದವನು । ಬೇಡುತಿದೆ ದಾನವನು । ರೂಢಿಪಾಲರ ಕಂಡು ಕೊಲ್ಲುತಿದಕೊ । ಆಡುತಿದೆ ಕಪಿಗಳೊಳು । ಓಡುತಿದೆ ಮೃಗದೊಡನೆ । ನೋಡ ಬರಿ ಮಡದಿ ಹಾವ ತಾಳಿಯುತಿದಕೊ ॥೨॥ ಇತ್ತ ಬಾರೆಂದೆನಲು ಬತ್ತಲೆ ನಿಲ್ಲುತಿದೆ । ಮತ್ತೆ ತೇಜಿಯನೇರಿ ನಲೆಯುತಿದಕೊ । ಯಿಚ್ಛೆ ಬಂದವರಿಂಗೆ ಅರ್ಥಿಯನು ತೋರುತಿದೆ । ನಿತ್ಯ ವೈಕುಂಠವಲಿ ನಲಿವ ಮಗುವ ॥೩॥

ಉದಯರಾಗ

ಸಕಲ ಸಿದ್ಧಿಪ್ರದಾಯಕನೇ ಸರ್ವೇಶ್ವರನೆ । ಅಖಿಳ ಜೀವರಿಗೆ ಸುಜ್ಞಾನಪ್ರ

ಪುಸ್ತಕವನ್ನು ಈ ವಿಭಾಗದಿಂದ ಹೊರಗೆ ಒಯ್ಯ[illegible]



ದಾಯಕನೆ । ಅಖಿಳಾಂಕನಿರ್ವಿಘ್ನನೆನಿಪ ವಿಘ್ನೇಶ್ವರನೆ । ಸುಕುಮಾರ ನೂಪ್ಪವಡಿಸಾ ॥ಪ॥ ದೇವೇಂದ್ರ ದಿಕ್ಕಿನೊಳು ರವಿಕಿರಣ ಬೆಳಗುತಿದೆ । ದೇವಸಂತತಿಯು ಅಷ್ಟದಿಕ್ಪಾಲಕರು ಸಹಿತ । ದೇವಯಕ್ಷ ಸಿದ್ಧ ವಿದ್ಯಾಧರರುಗಳು ನಿಮ್ಮ ಭಾವಿಸುತ ಬಂದಿರುವರೈ ॥ ಕಾವ್ಯ ನಾಟಕ ವೇದ ಶಾಸ್ತ್ರ ವಿದ್ಯಂಗಳನು । ಆವಾವ ಪುರುದ್ಯೋಗ ಬಲ್ಲರು ಕೂಡಿ । ಭಾವಿಸಲು ಗಜಮುಖನೆಯನುತ ಬಂದಿರುವರು ದೇವ ವಲಿದುಪ್ಪವಡಿಸ ॥೧॥ ಮುತ್ತಿನಾಭರಣ ನವರತ್ನದ ಕಿರೀಟವನು । ಕೆತ್ತಿಸಿದ ಪದಕವನು ಮಾಲೆ ಹೊನ್ನುಂಗರವ । ಸುತ್ತು ಗೆಜ್ಜೆಗಳುಲಿಯುತಿರುವ ಪಡ್ಯಾಣವನು ಪೊತ್ತು ತಂದಿರುವರಿದಕೊ ॥ ಮೊತ್ತದಿಂದೆಸೆಯುತಿಹ ಮೊಣಕಾಲ ಕಡಗಗಳು । ಪುತ್ತುಮಾಪುರುಷರು ಮತ್ತೆ ತಂದಿರುವರು ಅರ್ಥಿಯಿಂ ಬೇಗ ಮತಿಯಿಂ ಲಂಬೋದರನೆ । ಚಿತ್ತವಲಿದುಪ್ಪವಡಿಸ ॥೨॥ ಅಗಿಲು ಕುಂಕುಮ ಗಂಧ ಕಸ್ತುರಿ ಜವಾಜಿಗಳು । ಬಗೆಬಗೆಯ ಚಂದನವ ವಸ್ತ್ರ ಕೇದಾವರೆಯು । ಪಗುಮಿಗೆಯ ಧೂಪ ನೈವೇದ್ಯ ತಾಂಬೂಲಗಳ । ಮಿಗಿಲಾಗಿ ತಂದರಿದಕೊ ॥ ನಗೆಮೊಗದ ನಾರಿಯರು ಕಲಶಕನ್ನಡಿ ಪಿಡಿದು ಸೊಗಸಾಗಿ ಶೃಂಗರಿಸಿಕೊಂಡು ಬಂದಿರು ಹತಿರು ಮೃಗಧರನ ಕುವರ ಮೂಷಕವಾಹನ ದೇವ ನಗುತ ನೀನುಪ್ಪವಡಿಸ ॥೩॥ ಕಾಯಿ ಕಡಲೆಯು ಕಬ್ಬು ಕಜ್ಜಾಯ ಮೋದಕವು । ಪ್ರಿಯದಿಂದೆಸೆವ ಸೂಸಲ ಕಡಬು ಪುಂಡಲಿಗೆ । ಬಾಯಾರದಂತೆ ಸಕ್ಕರೆ ದ್ರಾಕ್ಷೆ ಕ್ಷೀರವವು । ಪ್ರಾಯದಿಂ ತಂದರಿದಕೊ ॥ ಆಯದಿಂದೆಸೆವ ನಾನಾ ಬಗೆಯ ಪೆಣ್ಗಳ್ ಹರುಷದಿಂ ತವಮತವ ಮಗೆ ಕೊಂಡು ಬಂದಿರುವರು । ಕಾಯಜಾರಿಯ ಪ್ರಿಯನೆನಿಪ ವಿಘ್ನೇಶ ಶುಭಕಾಯ ವಲಿದುಪ್ಪವಡಿಸು ॥೪॥ ಇಳೆಗಧಿಕ ಯಿಕ್ಕೇರಿಯೆಂಬ ಪುರವಾಸನೆ, ಚೆಲುವ ಶೃಂಗರದ ಮಂಟಪದೊಳಗೆ ನೆಲಸಿಹನೆ । ಸಲೆನೀಲಕಂಠನರ್ಧಾಂಗಿ ಗೌರಿಯ ಸುತನೆ ಕಳಕಳಿಪ ಸಂಪನ್ನನೆ ॥ ನೆಲವಿಂದ ಅಕ್ಕರದಿ ಗೆಲವೀವರನ್ನನೇ । ಗೆಲವಿಂದ ಚಲುವ ಶಕ್ತಿಗಳೊಳಗೆ ನಲಿಯುವನೆ । ಸಲೆ ರೂಢಿಸುವ ಸುಲಭದಿಂದು ಭಕ್ತರ ಪೊರೆವ ವಿಘ್ನೇಶ್ವರನೆ ವಲಿದುಪ್ಪವಡಿಸು ॥೫॥

ಉದಯರಾಗ

ನರಸಿಂಹ ಮಂತ್ರವಂದೇ ಸಾಲದೇ । ದುರಿತಕೋಟಿಗಳ ಸಂಹರಿಸಿ ಭಾಗ್ಯವನೀವ ॥ ನರಸಿಂಹಮಂತ್ರವಂದೇ ಸಾಲದೇ ॥ಪ॥ ಹಸುಳೆ ಪ್ರಹ್ಲಾದನಾತಲೆಗಾಯ್ದುದೀ ಮಂತ್ರ । ಅಸುರರೊಡಲನು ಬಗೆದ ದಿವ್ಯ ಮಂತ್ರ । ವಸುಧೆಯೊಳು ದಾನವರ ನಸುವಶೀಕರಿಸಿದ ಮಂತ್ರ । ಪಶುಪತಿಗೆ ಪ್ರಿಯವಾದ ಮೂಲಮಂತ್ರ ॥೧॥ ಧಿಟ್ಟ ಧ್ರುವರಾಯನಿಗೆ ಪಟ್ಟಗಟ್ಟಿದ ಮಂತ್ರ । ಶ್ರೀಪಟ್ಟಿಯೊಳ್ ವಿಭೀಷಣನ ಪೊರೆದ ಮಂತ್ರ । ಕಟ್ಟ ಕಡೆಯೊಳಗಜಾಮಿಳನ ಸಲಹಿದ ಮಂತ್ರ । ಮುಟ್ಟಿ ಪೂಜಿಸುವರ್ಗೆ । ಮಿಡುಕಿ ಶ್ರೀಪಟ್ಟ ಮಂತ್ರ ॥೨॥ ಹಿಂಡು ಭೂತವ ಕಡಿದು ತುಂಡು ಮಾಡಿದ ಮಂತ್ರ ।

Digitized by ROJA MUTHIAH RESEARCH LIBRARY

ಕೊಂಡಾಡೆಲೋಕಕ್ಕೆವೃದ್ಧಂಡಮಂತ್ರ। ಗಂಡುಗಲಿಕದನಪ್ರಚಂಡದಾನವರು
ಗಳಗಂಡಪುರಂದರವಿಠಲನೆನಿಮ್ಮಮಂತ್ರ ॥೩॥

ಉದಯರಾಗ

ಏದ್ದುಬಾರೆಸಂತರಂಗನೆ । ಯೆದ್ದುಬಾರೈಅಜಪಿಲಾಸನೆ । ಯೆದ್ದುಬಾರೆಂನಂತ
ರಂಗದಿನಲಿವವೇಶಿಕನೇಆತ್ಮ॥ ಯೆದ್ದುಬಾರೈ ॥ಪ॥ ಅಂಗವೆಂಬದೇವಾಲಯದಲ್ಲಿ
ಅಂತರಂಗನಿಮ್ಮಯಪೂಜೆಮಾಡುವೆ । ಮುಂದುಗೆಡಿಸುವಮಾಯಾಗುಣಗಳ ।ಕ
ಸವಗುಡಿಸುವೆನೂ । ಮಂಗಳಾಕರವಾದಕರಣೇಂದ್ರಿಯರೂದವುಪಕರಣಬೆಳಗುವೆ ।
ಅಂಗವನೆಪ್ರುಡಿಮಾಡಿ । ರಂಗವಾಲೆಯನಿಕ್ಕುವೆನುಆತ್ಮಾ ॥ ಯೆದ್ದುಬಾರೈ ॥೧॥
ಲೀಲೆಯಿಂದೆನ್ನಹೃದಯಕಮಲದಿಗೊಪಾಲನಿಮ್ಮಾ ವಾಹನೆಯಮಾಡುವೆಮೇರು
ಮನವನುನಿಮಗೆಕಮಲಾಸನವನಿರಿಸುವೆನು । ಜ್ಞಾನಭಾಗೀರಥಿಯಜೀವನ ।
ಯೀವೆಪಾದಾರ್ಘ್ಯಚಮನಕ್ಕೆ । ಸ್ನಾನಕ್ಕೆಯೆರವೆನುಬ್ರಂಹನಾಳಧಿದೇವಗಂ
ಗೆಯನು । ಆತ್ಮ ॥೨॥ ಸತ್ವರಜತಮಗಳೆಂತೆಂಬಚಿತ್ತತ್ರೈವತಂಬಿನವಿಧಭ
ಕ್ತಿಯಂಬೊಬತ್ತಿಹಾಕುವೆಮುಕ್ತಿದಾಯಕನೆ । ತತ್ವಪದದರ್ಪಣದಲಿ । ನಿಮ್ಮಂ
ಘ್ರಿಗಳರ್ಚಿಸುವೆ । ಲಕ್ಷಾರ್ಥವಿಡುವೆನುಲಕ್ಷದೀವಿಗೆಯನು । ಹತ್ತಿಸುವೆನುದ
ಯಾಂಬುಧಿಗೆ ।ಆತ್ಮ॥ ಯೆದ್ದುಬಾರೈ॥೩॥ ಅಷ್ಟದಿಗ್ವಸ್ತ್ರವನುನಿಮಗೆಸಮರ್ಪಿ
ಸುವೆ । ಸರ್ವೇಶಮುಂದಣಹುಟ್ಟುಗೆಡಿಸುವೆಧೋತ್ರವಪಾದಕ್ಕೆ ಅರ್ಪಿಸುವೆ ।ಅ
ಷ್ಟಮದಗಳನಳಿದು । ಆತ್ಮಗೆಆಗಂಧವನನುಲೇಪಿಸುವೆನು । ಪಾದಕ್ಕೆಮುತ್ತಿನ
ಕ್ಷತೆಯನಿರಿಸುವೆನು ।ಆತ್ಮ ॥೪॥ ಸುಜ್ಞಾನವೆಂತೆಂಬೊಅರಳಿದಹೂವನೂಶುಭ
ಪ್ರದರೂಪನೆನಿನಗೆಸಮರ್ಪಿಸುವೆನೂ । ಅಜ್ಞಾನಸುಜ್ಞಾನದಾಭರಣಭೂಷಿತ
ಗೆ।ಅದ್ವೈತಗೆಅಪ್ರಮೇಯಗೆ ।ಅಗಣಿತಾನಂದಸ್ವರೂಪಗೆ । ಜ್ಞಾನವೆಂಬಕವ
ಚಕಿರೀಟವನುಹಾಕುವೆನುಆತ್ಮಾ ॥೫॥ ಮೂಲಗುಂಡಿಗೆಧೂಪವನ್ನು । ವಾಯು
ವಾತ್ಮನೆನಿನಗೆಸಮರ್ಪಿಸುವೆನು । ಕಲವನಳಿದ । ಆತ್ಮದೀಪವನ್ನು । ವಿಶಾಲವಾ
ದಚರಾಚರದಿನಿಂದೆ । ಯೀವೆಪಂಚಾಮೃತವನೆಲ್ಲವನ್ನೈವೇದ್ಯಕ್ಕೆಯಿತ್ತೆನ್ನಯಾ
ನಾನಿತ್ಯತೃಪ್ತನಿಗೆಆತ್ಮ ॥೬॥ ನಿಂತನಿಜವೆಂಬ । ನಾಗವಲ್ಲಿಗೆ। ಅಷ್ಟಮದದ
ಡಿಕೆಯನುಮಡವೆನು ।ಶ್ರೇಷ್ಟದುರ್ಮತಿಯೆಂಬೊಸುಣ್ಣವನುಟ್ಬರಹದಮಾಡಿ ಕೆ
ಟ್ಟಕಾಮಕ್ರೋಧವೆಂತೆಂಬೊಕರ್ಪೂರಕ್ಕೆಯಲಿಲವಂಗಗುಳಿಗೆಯಪತ್ರಸಹವಾ
ಗಿಸಮರ್ಪಿಸುವೆಕಮಲಾಕ್ಷಚಿತ್ತೈಸುಆತ್ಮ ॥೭॥ ಸತ್ಯವೆಂತೆಂಬೊಛತ್ರಚಾ
ಮರನಿತ್ಯನಿರ್ಮಲಅಜನದರ್ಪಣತತ್ವಾರ್ಥತಾಳಮದ್ದಳೆನಿತ್ಯಸಂಗೀತ । ಶ್ರೀಯೊ
ಳುಪನೆಚಿಷನೆಸಂತಾನವೃತತ್ವಮಸಿಪದದೊಳ್ಳೈಕ್ಯಪ್ರ । ಮುಕ್ತಿಮಂಟಪದೊ

Digitized by ROJA MUTHIAH RESEARCH LIBRARY



ಳಗೆಮುಕ್ತಾಂಗನೆಯಕೊಡುವೆನುಆತ್ಮ ॥೮॥ ತೋರಿಯಡಗುವವಿಮಲಚಿನ್ಮಯದಿನಿ
ರಾಳಲಿಂಗವಪೂಜೆಮಾಡುವೆ । ಗುರುವೆ । ನಿಮ್ಮಪಾದಪದ್ಮಕೆತೋರಿದರ್ಧದಲಿ ।
ಭೂರಿಭೂರಿಗುಜನನಮರಣದಜೀರಸಳಿವಮೌನಸಪೂಜೆಯತೋರಿ । ತಾರಕಾ
ಬ್ರಂಹವನ್ನುಸೇರಿಸುವೆನುಹರಿಯೇ ಆತ್ಮ ॥೯॥ ಪಂಚಭೂತಗಳೆಂಬಆತ್ಮಗೆ
ಪಂಚಾರತಿಯು । ಅಗ್ನಿತ್ರೈಲವನಿರೋಚಯಗೆ । ನಿರ್ಮಲನಿಗೆನಿರಾತಂಕವಸ್ತುವಿ
ಗೆ । ಸಂಚಿತಾಗಮವೆಂಬಪ್ರದಕ್ಷಿಣೆನಿಂತ ನಿಜವಂದನೆಯಮಾಡುವೆಅಂತರಾತ್ಮಕ
ಆದಿಕೇಶವಮಂತ್ರಮೂರುತಿಗೆಆತ್ಮ । ಯೆದ್ದುಬಾರೈ ॥೧೦॥

ನಾರಾಯಣಯನ್ನಬಾರದೇ । ನಡುನಾಲಿಗೆಯೊಳುಮುಳ್ಳು ಮುರಿದಿಹುದೆ ॥
ಪ ॥ ನಿತ್ಯವುಪವಾಸವಿ । ಹಸಿದುಬಳಲುವದ್ಯಾಕೆ। ಮತ್ತೆಛಳಿಯೊಳುಗಂಗೆ
ಮುಳುಗಲ್ಯಾಕೆ । ಹಸ್ತವಾಪಿಡಿದು ಮಾಡುವಜಪತಪವ್ಯಾಕೆ । ಮುಕ್ತಿಸಾಧನವ
ಲ್ಲವೆಶ್ರೀಹರಿನಾಮಾ ॥೧॥ ವಾರಣಾಶಿಗಹೋಗಿ । ದೂರಬಳಲುವದ್ಯಾಕೆ । ಭಾರ
ಕಾವಡಿಹೊತ್ತು ತಿರುಗಲ್ಯಾಕೆ । ನೂನೆಂಟುದೇಶವ । ತೊಳಲಿಬಳಲುವದ್ಯಾಕೆ
ಮುಕ್ತಿಗೆಸಾಧನವಲ್ಲವೆಹರಿನಾಮ ॥೨॥ ಸತಿಸುತರನುಬಿಟ್ಟು । ಯತಿಗಳಾಶ್ರಮ
ವ್ಯಾಕೆ । ಯತಿಯಾದೆನೆಂಬಹಾಂಕಾರವ್ಯಾಕೆ । ಪೃಥುವಿಯೊಳಗನಮ್ಮಪುರಂದ
ರವಿಠಲನ । ಅತಿಸ್ನೇಹದಿಂದೊಮ್ಮೆನೆನದರೆಸಾಲದೇ ॥೩॥

ಉದಯರಾಗ

ಹರಿಯಂದುಮನದಲ್ಲಿ। ಮರದೊಮ್ಮೆನೆನದಾರೆ । ದುರಿತಸರ್ವತಂಗಳ ಖಂಡಿ।
ಪುದುವಜ್ರದಂತೆ ॥ಪ॥ ಶತಕೋಟಿಗೋದಾನವಮಾಡಲುನಿತ್ಯವ್ರತನೇಮಅನು
ದಿನಾಚರಿಸಾಲು । ಶ್ರುತಿಯುಪುರಾಣವು ಪಠಿಸಾಲುಲಕ್ಷ್ಮಿಯಪತಿನಾಮಸ್ಮರ
ಣೆಗೆ ಸರಿಯನ್ನಬಹುದೇ ॥೧॥ ಮೇರುಸುವರ್ಣದಾನವಮಾಡಲುಪುಣ್ಯ । ಭೂರಿ
ಕನ್ಯಾದಾನವಮಾಡಲು । ಧಾರುಣಿಯಲ್ಲವಧಾರೆಯನೆರೆಯಲು । ನಾರಾಯಣಸ್ಮರ
ಣೆಗೆಸರಿಯನ್ನಬಹುದೇ॥೨॥ಗಂಗೆಯಮುನೆಗೋದಾವರಿಕಾವೇರಿತುಂಗಭದ್ರೆಯ
ಲಿಸ್ನಾನವಮಾಡಲು । ಮಂಗಳಮಹಿಮಶ್ರೀ ಪುರಂದರವಿಠಲನ ರಂಗನಸ್ಮರ
ಣೆಗೆಸರಿಯನ್ನಬಹುದೆ ॥೩॥

ಉದಯರಾಗ

ಉದಯವಾದುದುಯೆಳೆನೇ । ವುದಯವಾದುದುಯೇಳುಮದನಪಿತಸಖನರಿ ।
ಮುದದಿಂದನಿನ್ನನಂಬಿದಭಕ್ತಜನಗಳನು । ಹೃದಯನಿಷ್ಕಾಲದಿಂಕಾಯ್ದುಕಾಪಾ
ಡುವರೆ ಪದುಮದಳನೇತ್ರಯೇಳೆತಾಯೆ ॥ಪ॥ ಮೂಡದೆಸೆಕೆಂಪದರೆ। ಪೂಡಿಸ
ಪ್ರಾಣಿಗಳಗಾಢದಿಂವಲಿಯರುಣಜೋಡಿಸಿದರಥವೇರಿ । ಮೂಡಿಬಂದನುಸೂರ್ಯ

ಕೂಡಿದಿಕ್ಪಾಲಕರು ಜೋಡಿಸಿದಕರಗಳಲಿ || ಆಡುವರು ಸುರರೆಲ್ಲ ರಂಭೆಪೂರ್ವಶಿಸಹಿತ | ಆಡುವರು ನಾಟ್ಯಗಳ ನಾರದಾದ್ಯರು ಕೂಡಿ | ಪಾಡುವರು ಗಾನಗಳ ಮಾಡುವರು ಭಜನೆಗಳ ನೋಡುವರೆಯೇಳು ತಾಯೆ ||೧|| ತಂಗಾಳಿ ಬೀಸುತಿದೆ ತರುಗಳಲಿ ಗಿಳಿವಿಂಡು | ಹಂಗಮೊದಲಾದ ಕೋಗಿಲೆಯು ಸುಸ್ವರದಿಂದ ಭೃಂಗವಿಂಡುಗಳೆಲ್ಲ ಸಾರುತಿದೆ ಕಮಾಕ್ಷಿ ಮಂಗಳಾಂಗಿಯರು ಭರದಿ || ಗಂಗೆಗೋದಾವರಿಯು ತುಂಗಭದ್ರೆಯು ಸಹಿತ ಗಂಗಾಧರನ ಸತಿಗೆ ಮಂಗಳಸ್ನಾನಕ್ಕೆ | ಭಂಗಾರದಾಕೊಡದಿ ಮಂಗಳೋದಕವನ್ನು ಹಿಂಗದೆ ತಂದಿಹರು ತುಂಗಕುಚೆ ಡಬಲೆಯೇಳು ತಾಯೆ ||೨|| ಕನ್ನೆಯರು ರನ್ನಕನ್ನಡಿಯನ್ನು ಪಿಡಿದಿಹರು | ಮುಂದೆ ತಾ ಕಾಮಧೇನುವು ಬಂದು ನಿಂದಿಹುದು | ಯಿನ್ನು ಶುಭಶಕುನಗಳು ವಿಪ್ರಪ್ರವೆ ಮೊದಲಾಗಿ | ನಿನ್ನನೇಕಾದುಕೊಂಡು || ಚಿನ್ನದರಿವಾಣದಲಿ ರನ್ನದಾರತಿ ಪಿಡಿದು ಕನ್ನೆಯರು ಚನ್ನಾಗಿ ನಿನ್ನ ಶೋಭಾನಗಳ ವರ್ಣಿಸುವ ವನಿತೆಯರಿಗಿನ್ನು ಸುಪದವಿತ್ತು | ಚನ್ನಾಗಿ ಸಲಹಲೇಳು ತಾಯೆ ||೩|| ಕಾದಿರುವ ಪನ್ನೀರು ಹದವಾರಿಯಾರುತಿದೆ | ತೇದಿರುವ ಕಸ್ತೂರಿಯು ಅರಶಿನವು ಶ್ರೀಗಂಧ | ಮೋದವಪ್ಪತವಾದ ಮರುಗ ಮಲ್ಲಿಗೆ ಜಾಜಿ ಕೇದಿಗೆಯ ಕುಸುಮಸಹಿತಾ || ಯಿಾಧರೆಯೊಳಿಲ್ಲದಿಹ ಪಾರಿಜಾತವು ಸಹಿತ | ಕುಂದುತಿದೆ ಸೂರ್ಯಕಿರಣಕೆ ಬಾಡಿ ವನಿತೆಯರು | ತಂದಿರುವ ಸಕಲಾಭರಣವಸ್ತುಗಳೆಲ್ಲ ಯಿಂದಿರಾಕ್ಷಿಗೆಯನುತಲಿ ||೪|| ದುಂಡುಬಾಳೆಯ ಹಣ್ಣು ಖಂಡಸಕ್ಕರೆ ಜೇನು | ತಂಡತಂಡದ ಫಲವ ಕೊಂಡು ಪೊಂದಳಿಗೆಯೊಳಗಿಟ್ಟು | ಮಂಡಲದ ಜನ ಹಿಂಡುಹಿಂಡಾಗಿ ನಿಂದ || ಅಂಡಲೆವುತಿರುವರು ಧರೆಯ ಭೂಸುರಜನರು | ಕಂಡೆವೆ ನಿಮ್ಮ ಪಾದದ್ವಯವನೆಂದೆನುತ ಪುಂಡರೀಕಾಕ್ಷಿ ರಕ್ಷಿಸಿ ಕಾಯೆ ನೀನೆದ್ದು ಭೂಮಂಡಲದ ಜನವನ್ನು ಮುದದಿ ||೫|| ಮೊಳಗುತಿದೆ ಭೇರಿ ನಿಸ್ಸಾಳ ಬೊಬ್ಬುಳ ಸಹಿತ, ಪ್ರೌಳಲು ಕೊಡುತಿದೆ ಜಗಕೆ ಮುರಜ ತಮ್ಮಟೆ ಕಹಳೆ | ದಳದುಳದ ಗಜತುರಗ ರಣಬಾಜ ಮೊದಲಾಗಿ | ಮಲವಿಂದನಿಂದ ಭಟರು || ಯಿಳೆಯ ಪಾಲಿಸುವಂತ ಚಾಮರಾಜನ ತನುಜ | ಲಲಿತಶ್ರೀಕೃಷ್ಣರಾಜಾಧಿಪನು ನಿನ್ನೆರಡು ತಳಿರ ಪೋಲುವ ಚರಣದರುಶನಕೆ ಬಂದಿಹನೆ | ವಲಿದನೀ ಕೃಪೆ ಮಾಡೆನೆ ||೬|| ವೇಲಾಪುರಾಧಿಪನ ಮೇಲು ಮೇಲು ನಿರುತ | ಪಾಲಿಸು ವಶಿಂಕರನ ಬಾಲಕೃಷ್ಣನು ನಿನ್ನ ಆಲಯಕೆ ಬಂದೀಗ | ಪೇಳುವನು ತನ್ನಿರವ ನೀಲಕುಂತಳೆ ಆಲಿಸೆ || ಬಾಲವಾತುಗಳೆಲ್ಲ ಫಾಲನೇತ್ರನ ಅರಶಿ | ಲೋಲೆ ಚಾಮುಂಡಿ ಮೇಲೀಲೆಯಿಂದಲಿ ಯನ್ನ ಪಾಲಿಸಲಿ ಬೇಕು ಯಿಾಕಾಲದಲಿ ವಲಿದು ಮುದದಿ ತಾಯೇ ||೭||

ಉದಯರಾಗ

ನೊಂದೆನಾ ಹರಿಯನ್ನದೇ ಸೋಂದೆನಾ ಸತ್ತು ಹುಟ್ಟುವ ಕೋಟಳೆಗಳಿಂದ ನೊಂ-

ಪುಸ್ತಕದಲ್ಲಿ ಗುರುತು ಹಾಕತಕ್ಕದ್ದಲ್ಲ



ದೆನಾ ನರಿಷಡ್ವರ್ಗಗಳೆಂಬ ವೇಧೆಗಳಿಂದ ನೊಂದೆನಾ ಪಂಚೇಂದ್ರಿಯಂಗಳಿಂದ ||ಪ|| ಒಂದು ಕ್ಷಣ ಮರ್ಗಂಧವಾಯು ಬರೆ ಹೇಸುವರು | ತಂದೆ ಪುದರದಿ ಮೂರುಮಾ|| ಸ ಸಂದೇಹವ್ಯಾಕೆ ತಾಯ್ಒಡಲಿನಲಿ ನವಮಾಸ ಮಂದಾಗಿ ಕುದಿದು ಬೆಂದು || ಒಂದೆನಾ ಎಂಭತ್ತುನಾಲ್ಕು ಲಕ್ಷಯೋನಿಗಳಲ್ಲಿ | ಹೊಂದಿದೆಡೆಯ ಮನಬಾಧೆಗೆ ತಾಳಲಾರೆನ್ನ ಯಿಂಬಿಟ್ಟು ಕಾಯ್ದುಕೊಳ್ಳೈ ಕೃಷ್ಣ ||೧|| ಹಲವು ಜನ್ಮದ ತಾಯಿಯ ಮನಗಿತ್ತ ಮೊಲೆ ಹಾಲು | ನಲಿದು ಪುಣ್ಯವಾಗ ನೆಲಕೆ ಬಿದ್ದಿಹ ಹನಿಯು | ನಳದು ನೋಡಿದರೆ ಕ್ಷೀರಾಂಬುಧಿಗೆಯಿಮ್ಮಿಗಿಲು ಬರಲು ಕಷ್ಟಗಳದಕ್ಕೆ || ಅಳುತ ಸುರಿದಶ್ರುಗಳು ಲವಣಾಂಬುಧಿಗೆಯಿಮ್ಮಿಗಿಲು ಸುಲಿದು ಚರ್ಮವ ಹಾಸಿದೊಡೆ ಯಿಾಭೂಮಿಗೈದು ಮಡಿಯು | ತನುವುಯೆಲು ಮಹಾಮೇರುವಿಗೆಯಿಮ್ಮಡಿಯು | ನೆಲೆಯಾವುದೀ ದೇಹಕೆನ್ನ ನಳಿನಾಕ್ಷ ಕಾಯ್ದುಕೊಳ್ಳೈ ಕೃಷ್ಣಾ ||೨|| ಹುಟ್ಟಿದಾಗಲೆ ಜಾತಕರ್ಮ ಷೋಡಶಮಂಬ | ಕಟ್ಟಲೆಯ ಶಿವಸದಲಿ ನೆಂಟರಿಷ್ಟರ ಕೂಡಿ | ಕಟ್ಟುಮುಂಜಿಯ ಮದುವೆ ಮಾಡಿ ಪುಂಡ ಹುಟ್ಟಹರುಪದೀ || ಬಿಟ್ಟುಮಾ ಪ್ರಾಣವು ಪೋಗೆ ತನುಗೊಂಡು ಮೂಲೆಯಲಿ ಕಟ್ಟಕಳ್ಳರಿಸಿ ಹೊಟ್ಟೆ ಹೊಯ್ಕೊಂಡತ್ತು | ಸುಟ್ಟು ಸುಡಗಾಡಿನಲಿ ಪಿಂಡಗಳನಿಟ್ಟು ಬಹುಕಟ್ಟಳೆಯ ಕಾಣಿಸದಿರೈ ಕೃಷ್ಣಾ ||೩|| ಎಲುಗಳುಗಳಂ ಮಾಡಿ ಬಲು ನರಂಗಳ ಬಿಗಿದು | ಚಲುವ ತೊಗಲಂ ಪೊದಿಶಿ ನೆಣಮಾಂಸ ಮಂಡಿರವೆತ್ತಿ | ಸಲೆ ರಚಿಸುತಾತನು ವಿನಾ || ಹೊಲೆಗೂಡಿನಲಿ ಗೂಡಿ ತಲೆ ಹಳತನಾಯಂತೆ ಮಮ ಮನೆಗೆ ಕಳವು ಹಾದರವು ಪಂಚಮಹಪಾತಕವು ನೆಲೆಯಾವುದೀ ದೇಹಕೆನ್ನ ನಳಿನಾಕ್ಷ ಕಾಯ್ದುಕೊಳ್ಳೈ ಕೃಷ್ಣಾ || ತಂದೆತಾಯಿಗಳಾರು ಬಂಧು ಬಳಗಗಳಾರು ಅಂದಿರ್ದ ಪೂರ್ವ್ಯಾಪ್ರದು | ಮಂದಿರವೆಲ್ಲಿ ತಾವು ತಂದ ಸತಿಸುತರೆಲ್ಲಿ | ಹಿಂದಾವ ಕುಲಗೋತ್ರನಾಮಂಗಳೇನು || ಅಂದು ಬಹು ನೊಂತು ತಾ ಬರೆತಂದ ಸುಖವೇನು | ಯಿಂದು ತಾ ಸೋತು ಬಂದಿರುವ ದುಖ್ಖವದೇನು | ಹಿಂದಣದನಾನರಿಯೆ ದಂದುಗವು ನೀ ಬಲ್ಲೆ | ಅಂದು ಕೊಂದವರ್ಯಾರು ಯಿಂದು ಕಾಯುವರಾರು | ತಂದೆ ಬಡವಾದಿ ಕೇಶವನೆ ನಿಮ್ಮಯ ಪಾದದ್ವಂದವನು ಬಿಡೆನೈಯ್ಯ ಕೃಷ್ಣಾ ||

ಉದಯರಾಗ

ಕೃಷ್ಣೇತಿಮಂಗಳಂ ನಾಮ ಹರಿಯೆ | ಯಿಷ್ಟದಲಿ ಭವಬಂಧನಷ್ಟವಾಗಿ ಹೋಯಿತು ||ಪಲ್ಲ|| ನಾರದಮುನಿ ತಾನು ನರಕ ಪಟ್ಟಣಕೋಗಿ | ವಾರಿಜೋಧರನೆಂದು ಪದಲಿದಾಗಾ ; ಘೋರಪಾತಕವೆಲ್ಲ ದೂರಾಗಿ ಹೋಯಿತು | ಸೂರೆಗೊಂಡಿತು ಸ್ವರ್ಗ ನಿಮಿಷದೊಳಗೆ ||೧|| ಧ್ರುವ ತನ್ನ ತಂದೆ ತೊಡೆಮೇಲೆ ಕುಳ್ಳಿರ ಹೋಗೆ ಅವನ ಮಲತಾಯಿ ಗರ್ಜಿಸಿ ನೂಕಲು | ತನ ಗೃಹಂಗಳ ಬಿಟ್ಟು ವನಕೋಗಿ ಹರಿಯನಲು || ತವಕದೊಳಗಾನಂದಪದವಿತ್ತ ನಾಮ ||೨|| ಪಂಚಪಾಂಡವರನ್ನು ಪಾಲಿಸಲು ಯಿಾ ನಾಮ | ಪಾಂ

Digitized by ROJA MUTHIAH RESEARCH LIBRARY

ಚಾಲಿಮೊರೆಗೇಳೆಶರೆಯಬಿಡಿಸಿ |ವಂಚನೆಯಮಾಡಿಕೌರವರಸಂಹರಿಸಿಸಲೆ| ಚಂಚಲಿಲ್ಲದೆಪಾಂಡವನಿಗೆಪಟ್ಟಗಟ್ಟಿದನಾವ॥೩॥ ಸರಸಿಯೊಳುಜಲಕೇಳಿಯೊಳಿರಿಯಬಾಧೆಗೆಸಿಲುಕಿ | ಕರಿರಾಜಹರಿಯೆಂದುಮೊರೆಯಿಡಲು | ಶಿರಿಗೆಹೇಳದೆಹೋಗಿಕರಿಯಕಾಯಿದದೇವಕರಿವರದಯೆಂದೆನಿಸಿಕೊಂಡೆಜಗದೊಳಗೆ॥೪॥ ಹಿರಣ್ಯಕಶಿಪುತನ್ನಮಗನಬಾಧೆಯಬಡಿಸಿ | ಗಿರಿಯುಗಂಹೆರವಲ್ಲಿಯಿಡಾಡಲು | ನರಹರಿಯೆರಕ್ಷಿಸೋರಕ್ಷಿಸೋಯೆಂದೆನಲುನರಸಿಂಹರೂಪದಿಂದವನಕಾಯ್ದನಾವ॥೫॥ ಅಜಮಿಳನುಮಿನಾವಮಅಂತ್ಯಕಾಲದಿಸ್ಮರಿಸಿ | ನಿಜಮುಕ್ತಿಹೊಂದಿದನುಸಿಮುಪತೊಳಗೆ | ಭುಜಗಭೂಷಣತನ್ನನಿಜಕಾಂತೆಯನುಕರದು | ಭಜಿಸೆಂದುಪೇಳ್ದನೀಶ್ರೀರಾಮನಾವ ॥೬॥ ಪರಿಪರಿಯುಭಕ್ತರನುಪಾಲಿಸಿದುದೀನಾ ಮಪರಮಮಂಗಳವುಪಾವನವುಹರಿನಾವ ॥ ಹರನುಬ್ರಹ್ಮಾದಿಗಳುಸ್ಮರಣೆಮಾಡುವನಾವ | ವರಪುರಂದರವಿಠಲನಿಮ್ಮನಾವ | ಕೃಷ್ಣಕೀರ್ತಿಮಂಗಳನಾವ ॥೭॥

## ಉದಯರಾಗ

ರಾಗ—ಭೂಪಾಳ ॥ಹರಿಯೆಶ್ರೀವೇಂಕಟಾಧೀಶನೆ ॥ ಪಲ್ಲ॥ ಧರೆಯೊಳತಿಶಯವಾದನೈಮಿಶಾರಣ್ಯದೊಳು | ಪರಮಋಷಿಶೌನಕಾದಿಗಳೆಲ್ಲವಂದಾಗಿ | ಗುರುಸೂತರಿಂದಶ್ರೀಹರಿಯಚರಿತೆಗಳನ್ನುಹರುಷದಿಂದಲಿಕೇಳುತಾ ॥ ಕರಿರಾಜವರದಜಗನ್ನಾಥದೇವನಮಹಿಮೆ | ಪರಮಭಕ್ತಿಯಲೀಗಕೇಳದೆವುತವಿಸ್ಮಂದ |ಗರುಡವಾಹನನಾದವೇಂಕಟೇಶನಚರಿತೆ | ಕರುಣಿಸೈನಮಗೆಂದರೂ ॥೧॥ ಋಷಿಗಳೆಲ್ಲರಮಾತನಸೂನಗುತಕೇಳುತ್ತ | ಯಸನಸಂತೋಷದಲಿಆನಂದಗೊಡುತ್ತ | ಕುಸುಮನಾಭನದಿವ್ಯಘನವಾದಚರಿತೆಗಳ | ಉಸುರುವೆವುಕೇಳಯೆಂದು ॥ ವಸುಧೆಯೊಳಗೀಮಹಿಮೆಯಿಂದಿಷ್ಟಸಿದ್ಧಿಪುದು | ವಸುಧೆಪತಿಜನಕೇಂದ್ರನಿಗೆಶತಾನಂದನರು |ಹಸನಾಗಿಪೇಳ್ದರೀಕಥೆಯವರ್ಣಿಸುವೆನಾಸ್ಥಿರಭಕ್ತಿಯಿಂಕೇಳಿರೈ ॥೨॥ಧರೆಯೊಳತಿಶಯವಾದವಿಮಿಥಿಲಪಟ್ಟಣದಲ್ಲಿ | ಧರಣಿಪತಿಜನಕೇಂದ್ರಪರಮಸಂತೋಷದಲಿ | ಧರೆಯಪಾಲಿಸುತಿರಲುಕುಶಕೇತನೆಂಬನುಜನುಸುಂದರನಗರಕೆನಡೆಯಲು ॥ ಉರುತರದದುಃಖದಿಂತನ್ನಮಕ್ಕಳನೋಡಿ | ಮನದಿಮರುಗುತಲಿರೆಗುರುಶತಾನಂದನನು | ಅರಮನೆಗೆನಡೆತರಲುಅರಸನೆದುರಿಗೆಬಂದು | ಚರಣದೊಳುನಮಿಸಿನಿಂದು ॥೩॥ ಕನಕಮಯಪೀಠದಲಿಕುಳ್ಳಿರಿಸುತಿರಲಾಮುನಿಯು | ಜನಪಕೇಳೈನೀನುಮನದಚಿಂತೆಯತ್ಯಜಿಸು | ಘನಪಾಪನ್ಶೈಕುಂಠಗಿರಿಮಹಾತ್ಮೆಗಳನ್ನುವಿನಯದಿಂದಲಿಲಾಲಿಸು॥ ವನಜಸಂಭವಕೇಳೆಬ್ರಹ್ಮಪಟ್ಟವುಬಂತು | ವನಿತೆಶಚಿಕಾಂತನಿಗೆಯಿಂದ್ರಪಟ್ಟವುಬಂತು | ಗಣಪತಿಯುಜನಕನಿಗೆರುದ್ರಪಟ್ಟವುಬಂತು |ಕನಕಗಿರಿಮಹಿಮೆಘನ



ವ್ರುಳಿ ವೃಷಭಾಸುರನುಯುಂಬಅಸುರೇಂದ್ರಪರ್ವತದಿ | ಋಷಿಗಳೆಲ್ಲರಶ್ರಮವಪಡಿಸೆಮೊರಲುಹರಿಗೆ | ಕುಸುಮನಾಭನುಬರಲುಅಸಪಸವರನಪಾಡಿಯಗವಭಕ್ತಿಯಲಿಸ್ತುತಿಸೆ ॥ ಅಸುರವೈರಿಯುಖಳಗೆಮುಕ್ತಿಯನುಕರುಣಿಸುತ | ಪೆಸರನಿಟ್ಟನುಗಿರಿಗೆವೃಷಭಾಚಲವುಯಂದು | ವಸುಧೆಯೊಳುಕೃತಯುಗಕೆಕೇಳಯ್ಯರಾಜೇಂದ್ರಯೆಷ್ಟುಪೇಳಲಿಮಹಿಮೆಯ ॥೪॥ ಕೇಸರಿಯುಯುಂಬಮರ್ಕಟನಸತಿಅಂಜನೆಯು |ಲೇಸಾದವರವತುಜಲಿಯಿಂದಕೈಗೊಂಡು | ವಾಸುದೇವನಗಿರಿಯಸೇರಿವಾಯುದೇವರಕುರಿತುತಪದಿನಿಂದಳುಭಕ್ತಿಲೀ ॥ ಉಸುದತಿಗರ್ಭದಲಿಪಿಕ್ರಮನುಜನಿಸಿದನು| ಶ್ರೀಶನಾರಾಯಣನನಿಜದಾಸಹನುಮಂತ ; ಕೇಶವನಗಿರಿಗತಾಅಂಜನಾಚಲವೆಂದುತ್ರೇತಾಯುಗದಲಿನಾವ ॥೫॥ ಶೇಷವಾಯುಪಿವಾದದಲಿಸುಮರಬಲಿದಾಗೆ | ಶೇಷಶಯನನನುಜ್ಞೆಯಿಂದಲಾಗಿರಿಸಹಿತ | ಘಾಸಿಮಾಡದೆಶಿಖರಕಿಟ್ಟನಾಮರುತವರುವಾಸವಾದ್ಯರುಪೊಗಳಲು ॥ ಶೇಷಾಚಲವುಯಂದುದ್ವಾಪರಯುಗದಿನಾವ | ವಾಸಿಯಾಯಿತುಕೇಳುರಾಜರಾಜೇಶ್ವರನೆ | ಯೇಸುಸಂಭ್ರಮವನ್ನುವರ್ಣಿಸುವೆಕೇಳಯ್ಯ ದೋಷರಹಿತನಚರಿತೆಯ॥೬॥ಧರಣಿಸುರನೊಬ್ಬವಸುದೇವನೆಂಬವನು | ತರುಣಿಕುಂತಳೆಯುಂಬಚಂಡಾಲವನಿತೆಯನು | ಪರಮವಿಶ್ವಾಸದಲಿಭೋಗಿಸುತಚಂಡಾಲಕೃತ್ಯದಲಿಯಿದ್ದನವನು॥ಮರಣವನುಪ್ರೋಡಿದಳುಕೇಳುವುದಿಸಕೆತರುಣಿ |ಮುರಗಿಕಳವಳಿಸುತ್ತಧರೆಯನೆಲ್ಲತಿರುಗಿ | ತಿರುಪತಿಗೆಬರುವವರಪಡಗೂಡಿತಾಬಂದುಕಪಿಲತೀರ್ಥದಿಸ್ನಾನವ॥೭॥ಪರಮನೇಮದಿಮೂಡಿತೀರ್ಥಶ್ರಾದ್ಧವರಚಿಸಿ ; ಗಿರಿಯಹತ್ತಿದಸ್ವಾಮಿಪುಷ್ಕರಣಿಯಂದೆಂಬ | ಸರಸಿಯಲಿಸ್ನಾನವನುಮಾಡೆಪಾಪಗಳೆಲ್ಲವಮನವಮಾಡಿದಕ್ಷಣದಲಿ ॥ ಸರಸಿಜಾಸನನಂತರಿಕ್ಷದಲಿಪೇಳಿದನು | ಧರಣಿಸುರಕೇಳುನೀಮಾಡಿರುವದೋಷಪಗಿ | ಹರಗಳಾಯಿತುಬಹುಪುಣ್ಯವಂತನುನೀನಾಕಾಶರಾಯನೆಂದು ॥೮॥ನಾರಾಯಣಾಖ್ಯನಗರದಿರಾಜ್ಯಭಾರವನು | ಮೇರೆಯಿಲ್ಲದೆಮಾಡುಸತ್ಯದಿಂದಲಿನೀನು,ವಾರಿಜಾಕ್ಷನುಮುಂದೆಯಿಗಿರಿಯೊಳ್ನಿಲಸುವನುಆದಿಶಕ್ತಿಯುನಿನ್ನಲಿ ॥ತರಳೆರಾಪದಿಪದ್ಮವತಿಯಂದುಮಗಳಾಗೆ | ಹರಿಗೆಕೊಡುಸ್ವಾಮಿಜಾಮಾತನಾಗುವನಿನಗೆ| ವರಹದೇವನದರುಶನವಮಾಡೆಂದೆನುತ | ಕರುಣಿಸಿದನೆಷ್ಟಣೆಯನು॥ಮಾಡಬಾರದಪಾಪವಮಾಡಿದರುಪ್ರೋಪುದ್ಯೆ | ರೂಢಿಯೊಳುಯಿಗಿರಿಗೆಸಮವಿಲ್ಲಕೇಳೈಯ್ಯ | ರೂಢಿಗತಿಶಯವೆಂಕಟಾಚಲವುಪೆಸರಾಯುತ್ತಜೀಡಿದೊರಗಳಕೊಡುವದು॥ಆಡಲವೆಮ್ಮನುಧೊರೆಯೆಯಿಮಹಿಮೆಪಠಿಸುವಗೆ | ಕಾಡದವಮೃತ್ಯುಗಳುಸಕಲದುರಿತಕ್ಷಯವು | ಬಾಡಬೇಕೈನಿತ್ಯಕಡಲಶಯನನನಾಮವೆಂದುಪೇಳಿದಮುನಿಪನು ॥೯॥ ಈಮಾತಕೇಳಜನಕೇಂದ್ರಹರ್ಷವತಾ

ಳ| ಆಮಹಾಪರ್ವತಕೆದೇವಬಂದನುಹ್ಯಾಗೆ | ಪ್ರೇಮದಿಂದವೃಣಿಯಕೊಡಿಯನೆಶ
ತಾನುದಪೇಳಿದನುಹರಿಕಥೆಯನು"ಸೋಮಶೇಖರಜಟಾಪಲ್ಲಭೆಯತೀಗದಲಿ | ಆಮ
ಹಾಋಷಿಗಳೆಲ್ಲರುಯಜ್ಞಕೈಕೊಳಲು | ಆಮಹಾಸಭೆಯೊಳಗೆನಾರದನುಕೇಳಿದ
ನುಮೂರುದೇವರೊಳಧಿಕರು||೧೩|| ಯಾರುಶ್ರೇಷ್ಠರುನೀವ್ರಯಾವದೇವರಕರಿ
ತು |ಭೂರಿಯಜ್ಞವಮಾಡುಪಿರಿಪೇಳಿಯೆಂದೆನಲು| ಧಾರುಣೀಸುರರೆಲ್ಲಭೃಗುಋ
ಷಿಗಳನುತಿಳಿ(ತಿ)ಕಳುಹೆಬಂದನುವೇಗದಿ || ಶಾರದೆಯಪತಿಬಳಿಗೆಬರುತೀವಗುಣ
ಕಂಡು | ಧಾರುಣಿಯೊಳ್ನಗೆಪೂಜಿಸಲಬೇಡಂದೆನುತ | ಕ್ರೂರಶಾಪವಕೊ
ಟ್ಟುರುದ್ರನವಗುಣನೋಡಿನಿನ್ನರೂಪಿಗೆಪೂಜೆಯ ||೧೪||ಯಾರುಮಾಡಲುಬೇಡ
ನಿನ್ನಲಿಂಗಕೆಪೂಜೆ | ಘೋರಂತೆನಡೆಯಲೆನ್ನುತಶಾಪವನುಕೊಟ್ಟು| ಸಾರಿಬಂದನು
ವಿಷ್ಣುವಿನಬಳಿಗೆಕಾಲಲೊದ್ದನುಪುರದರವ ||ಮುರಹರನುನೋಡಿಭಕ್ತಿಯಲಿಚರಣ
ಕೆನಮಿಸಿ | ಪರಿಪರಿಯುಪಚಾರವನುಮಾಡೆಭೃಗುಋಷಿಯು | ಪರಮಹರುಷವ
ತಾಳಿಪೊರಟುಬೇಗದಿಬಂದುವರದನಡದುಡನೆಲ್ಲವ|| ಮೂರುದೇವರೊಳಧಿಕಲಕ್ಷ್ಮೀ
ನಾರಾಯಣನು |ಧಾರುಣೀಸರರಲ್ಲಿಋಷಿಗಳಲಿಸಹಿತಾಗಿ | ವಾರಿಜಾಕ್ಷನಿಗೆಅ
ರ್ಪಣೆಯಂದುಮಾಡಿನೀವೆಲ್ಲಯನ್ನುತನುಡಿದನು||ಕ್ರೂರಕೋಪವತಾಳಶಿರಿದೇವಿ
ಹರಿಯೊಡನೆ| ಸಾರಿಬಂದಳುಕೊಲ್ಲಾಪುರಕೆತ್ರಿಜಗನ್ಮಾತೆ | ವಾರಿಜಾಕ್ಷನುಬಹ
ಳಮರುಗುತ್ತವೈಕುಂಠಪುರದಿಂದಬುದಗಿರಿಗೆ ||೧೫||ನೂರುಯೋಜನನೀಮಾಮ
ಹಾಪರ್ವತವು |ಮೇರೆಯಿಲ್ಲದೆಯಿರುವದೈಪುಷ್ಪವೃಕ್ಷಗಳು | ಮೂರುಕೋಟಿಯ
ತೀರ್ಥವಿರುವದೈಸಂತಸದಿ | ಸ್ವಾಮಿಪುಷ್ಕರಣಿತೀರ್ಥ||ನಾರದಾದಿಗಳೆಲ್ಲವಾಸವಾ
ಗಿರುತಿಹರು |ನಾರಸಿಂಹನಗಿರಿಗೆಮುಖಭಾವಕೇಳಯ್ಯ | ನೂರೆರಡುಯೋಜವು
ಜಾನ್ಹವಿಗೆಪುಚ್ಛಶ್ರೀಶೈಲವೈಕೇಳುಯಂದ ||೧೬|| ಕರವೀರಸೇವಂತಿಮೊಲ್ಲೆಮ
ಲ್ಲಿಗೆಪಜಿಪರಿಮಳದಚಂಪಕವುಫುಲ್ಲಮಾದರಿಬಕುಳ ಶಿರಿತುಳಶಿಕೇತಕಿಯುಸುರಗಿ
ನಂದ್ಯಾವರ್ತಸುರಹೊನ್ನೆಮರುಗಬಿಲ್ವಾ || ಪರಿಪರಿಯಪುಷ್ಪಂಗಳೆಲ್ಲವಿಕಸಿತವಾ
ಗಿ| ಯಿರುವದಾವರಗಿರಿಯಫಲಭರಿತವೃಕ್ಷಗಳು | ಅರಳಿಆಲವುಅತ್ತಿತೆಂಗುನಾರಿಂ
ಗಗಳುಮೆರೆವಖರ್ಜೂರಕದಳಿ ||೧೭|| ಪೂಸದಾಡಿಮಕ್ರಮುಕಚೂತನೇರುಳೆಧಾ
ತ್ರಿ | ದಿನಪಬಿಂಬವನಡರುವಂತೆಯಿರುವವಾವೃಕ್ಷ | ವನಜಸಂಭವಬಲ್ಲಯಿಾಮಹಾ
ಪರ್ವತವುಯೆಣಿಕೆಯಿಲ್ಲದತರುಗಳು|| ಗಿಣಿಯುಕೋಗಿಲೆಹಂಸೆಚಕ್ರವಾಕವುನವಿ
ಲು ವನದಲ್ಲಿಗೃಧ್ರವಾಯಸಗರುಡಕಾಗಂಢ| ಮನದಣಿಯಲಾಡುತ್ತಯಿರುವದೈ
ಸಂಭ್ರಮದಿಪರಿಪರಿಯಮೃಗಗಳಂಡು||೧೮||ಕರಡಿಕಾಡೆಮ್ಮೆಕಾಡ್ಗೋಣಕರಿಸಿಂ
ಹಗಳು | ಹರಿಣಶರಭವ್ಯಾಘ್ರಕಾಡ್ವಂದಿಸರ್ಪಗಳುಮೊದಲ್ಗೊಂಡು| ಬರುತಿಹು



ದುಮೃಗಗಳ್ವಂಡುಗಳೆಲ್ಲಿಪರಮಶ್ರೇಷ್ಠವೃಪರ್ವತಾ||ಧರೆಯೊಳಗೆಯಿರುವಂಥಮೂ
ರುಕೋಟಿಯತೀರ್ಥ| ಬರುವದೈಧನುರ್ಮಾಸಶುದ್ಧದ್ವಾದಶಿದಿನದಿ | ಅರುಣವುದಯ
ದಿಸ್ನಾನವನುಮಾಡೆದುರಿತಗಳುಪರಿಹರವುತತ್ಕ್ಷಣದೊಳು ||೧೯|| ಇಂತುಮತಿಶಯ
ವಾದಸ್ವಾಮಿಪುಷ್ಕರಣಿಗೆಯು | ತಿಂತ್ರಿಣೀವೃಕ್ಷದಕ್ಷಿಣದಿಕ್ಕಿನಲ್ಲಿಹುದು| ಕಂತು
ಪಿತತಾಬಂದುವಲ್ಮೀಕದೊಳುಪೊಕ್ಕುಸಂತಸದಿಯಿರುತಿರ್ದನು||ಬಂತುಕಲಿಯುಗ
ವರುಷಅಷ್ಟವಿಂಶತಿಯುನದ |ನಂತರದಿಚೋಳರಾಯನುಯಂಬನೃಪಪುಟ್ಟ| ಚಿಂ
ತೆಯಿಲ್ಲದೆಧರ್ಮದಿಂದಲಾಳದಧೊರೆಯುಶಿರಿದೇವಿಗೋಪಿಯಾಗಿ ||೨೦||ಸರಸಿಜಾಸ
ನಗೋವುರೂಪತಾಳಿವರುದ್ರ | ಕರುಮಾದನಾಚೋಳರಾಯನಲ್ಲಿಗೆಬಂದು| ಕರು
ವುಹಸುಸಹಿತಾಗಿಕೊಟ್ಟಳೈಮೌಲ್ಯಕ್ಕೆ ಅರಸನೋಡಿದಪ್ರೀತಿಲೀ|| ತುರುಕರು
ವಕಾಯುವರೆಗೋಪಾಲನಿಗೆಪೇಳೆ | ಗಿರಿಯಮೇಲಕೆಬಂದುಮೇಯಲಿಕೆಬಿಡಲಾಗ |
ಹರಿಯಿರುವವಲ್ಮೀಕದಮೆಲೆಕ್ಷೀರವಕರದುಬರುತಲಿರ್ದವುತುರುಕರು || ಬಂದುದಿನ
ದಲಿಕ್ಷೀರಯಿಲ್ಲದೇಯಿರುತಿರಲು | ಚಂದಿರಾನನೆರಾಜಪತ್ನಿನೋಡುತಬೇಗ | ಮಂ
ದಭಾಗ್ಯನೆಯೆಂದುಗೋಪಾಲಕನಬಡಿಯೆಬಂದುನೋಡಿದಗಿರಿಯೊಳು ||ನಿಂದುಕ್ಷೀ
ರವಕರೆಯೆನೋಡಿಕೋಪವತಾಳಿ | ಯಿಂದುಬಡಿಯುವೆನೆಂದುಕೊಡಲಿಯನುಪಿಡಿ
ದೆತ್ತಿ |ಸಿಂಧುಶಯನನುಹುತ್ತದಿಂದಮೇಲಕೆಬಂದುತಲೆಯನೀಡಿದದೇವನು||೨೧||
ಏಳುತಾಳದವೃಷ್ದಶೋಣಿತವುಚಿಮ್ಮಿದುದು| ಕಾಳುಗೋಪಾಲಕನುಅಲ್ಲೆಮೃತ
ವಾಗಲು | ಭಾಳದುಃಖದಿಗೋವುಅರಸನೆದುರಿಲಿನಿಲ್ಲೆಪೊರಟುಬಂದನುಅಲ್ಲಿಗೆ||ಆ
ಲಿಸುತಮೌನವನುಪಿಡಿದುನಿಲ್ಲಲುಅರಸ | ಶ್ರೀಲೋಲವಿಶ್ವರೂಪದಿಬಂದುಪೇಳಿದ
ನು ಕೇಳುನೀಭೂಮಿಯೊಳಪೈಶಾಚನಾಗಿಜನಿಸೆನ್ನುತಪ್ಪಣೆಕೊಟ್ಟನ ||೨೨||
ಮುರಹರನೆನಾನೊಂದನರಿಯೆಶಾಪವೃಪಂಟೆ| ಕರುಣವಿಡುಸ್ವಾಮಿಯನ್ನುತಪೇಳೆ
ದೇವೇಶ |ಧರಣೀಶಲಾಕಾಶನೃಪನನಿಜಸುತೆಯನ್ನುವಲಿಸಿವೈವಾಹಿಕವನು||ವಿರಚಿ
ಸುವೆನಾವೇಳೆನೂರುಭಾರದಮುಕುಟ | ಕರುಣಿಸುವಶುಕ್ರವಾರದದಿವಸಧರಿಸುವೆ
ನು| ದರುಶನವನೀಮಾಡುಯಿಾಮಹಾಶಾಪವನುಹರಿದುಪ್ರೋಗುವದುಯಂದು||೨೩||
ಈರೀತಿಯಿಂಕೆಲವುದಿನಸಲ್ಲೆಸ್ವಾಮಿತಾ| ಧೀರಗುರುಗಳಸ್ಮರಿಸೆಬೃಹಸ್ಪತಿಯು
ಬಂದು | ವಾರಿಜಾಕ್ಷನಕೇಳುಯಕ್ಕೆಹತ್ತಿಯನೀಗಕ್ಷೀರದೊಳುನೆನಸಿಧರಿಸು||ನಾ
ರದಾದಿಗಳೆಂದ್ಯಘಾಯಪ್ರೋಗುವದೆನಲು | ಶೌರಿದಿನಚರಿಯದೊಳುವನದೊಳ
ಗೆಬರುತಿರಲು | ಮೂರುಲೋಕಕಧೀಶವರಹದೇವನಕಂಡುನೂರುಹೆಜ್ಜೆಯಭೂ
ಮಿಯ||೨೪||ಕೇಳಿಕೊಟ್ಟನುತನ್ನತಂಗಿಬಕುಳೆಯುವಶಕೆ | ಪಾಲಿಸಿದಳಾತನ್ನಸು
ತನತೆರದಲಿಹರಿಯ | ಶ್ರೀಲಕುಮಿಪತಿಯುಸರ್ವಾಭರಣಗಳನಿಟ್ಟುತುರಗನೇರು

Digitized by ROJA MUTHIAH RESEARCH LIBRARY

ತನಶವನ್ನು॥ ಬಾಳಸಂತೋಷದಲಿಬೇಟೆಯಾಡುತಬಂದ । ಲೋಲಾಕ್ಷಿಯರಕಂಡು
ಶೃಂಗಾರವನದಲ್ಲಿ ।ಪೇಳಿದಸರಸಮಾತುಗಳನ್ನಾಡಿದನುಬಾಲೆಯರಕೂಡೆಯಾ
ಗ॥೨೬॥ಬಾಲೆಯಿವಳ್ಯಾರೆಂದುಸಖಿಸೊಡನೆತಾಕೇಳೆ। ನಾಲಿಸೈಯಾಕಾಶನೆಂಬನೃ
ಪಜನಿಸಿದನು । ಪಾಲಿಸಿದಧರಣಿಯನುಮಕ್ಕಳಿಲ್ಲಪ್ರಿಯೆಂದುಯಾಗಮಾಡಿದಧರ
ಣಿಪಾ॥ ಲೋಲಾಕ್ಷಿದೊರಕಿದಳುಪದ್ಮಪತ್ರದಿದೇವಿ । ಕೇಳುಔರಸಪುತ್ರಿಯಂತೆ
ನೀತಿಳಿಯಿಂದು । ಪಾಲಿಸಿದಅಪ್ಪಣೆಯಸುರಮುನಿಪನಾರದನುತಾತಿಳಿದುಸಂತಸ
ಪನು ॥೨೭॥ ದೇವದೇವನರಾಣಿಯಿವಳೆಯನ್ನುತಪೇಳೆ । ಭಾವಕಿಗೆಪೆಸರಿಟ್ಟಪ
ದ್ಮಾವತಿಯೆಂದು । ತೀವಿದತಿಸಂತಸದಿಸಲಹುತಿಹನಾಸತಿಯನು ॥ ಶ್ರೀಪ
ಧೂವರನಕರುಣದಿಪುಟ್ಟಿದೀಸತಿಯು । ಯಾರುಹೊಗಳುವಡಿದಃಶ್ರೀಧರನಸತಿ
ಸೊಬಗ।ಭಾವಜನಪಿತನರಾಣಿಗೆಯವ್ವನವುಬಂತುವನಕೆಬಂದಳುಕ್ರೀಡೆಗೆ॥೨೮॥
ಆನಾರಿಯರಕೂಡೆಸಂಭಾಷಣೆಯಮಾಡೆ । ಯೇಣಾಂಕವದನೆಯರುಕಲ್ಲುಕಲ್ಲುಗ
ಳೆಸೆಯೆ । ಶ್ರೀನಿಧೀರಮಣನೇರಿದತುರಗಕೆತಾಕಿವುಸರನೀಗುತಬಿದ್ದಿತಃ । ಯಿ
ನಿರೋಷವುಮಿಾಗಬಂತೆಂದುದೇವಶ್ರೀ ।ತಾನೆದುಃಖವತಾಳಿಬಂದುದ್ದೇಗಿದನಾಗ।ಮಾ
ನವೇಂದ್ರನಸುತೆಯುವಿರಹತಾಪದಿತನ್ನಅರಮನೆಗೆನಡದಳಾಗ॥೨೯॥ ಇತ್ತಬಕು
ಳೆಮಾಸ್ವಾಮಿಯನುನೋಡಿಕಳವಳಿಸಿ । ಯತ್ತಣದುಬ್ಬುವೈಬ್ರಹ್ಮಾಂಡನಾಯಕ
ನೆ । ವೃತ್ತಮದತರುಣಿಯನುಕಂಡೆಯೋಹ್ಯಾಗೆನಲು । ಯೆದ್ದುಕುಳಿತನುದೇವ
ನು ॥ ಪೃಥ್ವಿಪತಿಯಾಕಾಶರಾಯನೆಂಬನಸುತೆಯು । ಮತ್ತಗಜಗಮನೆಗಿನ್ನಾರು
ಪೋಲುವಿಲ್ಲ । ಚಿತ್ತವಿಭ್ರಮನಾಗಿತುರಗವನುಕಳಕೊಂಡವನಿತೆಯನುಕೂಡಿಸಂ
ಮು । ತರುಣಿಪೂರ್ವದಿಯಾರುಪೇಳುಯನಕಂಡೈಯ್ಯಮರುಗಿಕೇಳಲುದೇವವೃತ್ತಾ
ರವಪೇಳವನು । ತರಣಿವಂಶದಿಪುಟ್ಟಿಸೀತೆಯನುವಶಗೊಂಡುಯಿರುತಿರ್ದಪಂಚ
ವಟದಿ॥ಮರುಳೆರಾವಣಸೀತೆಯನ್ನುಪ್ರೊಯ್ಯಲುಬರಲು । ಹರಣಾಕ್ಷಿಮಾಯಸೀತೆ
ಯಮಾಡಿಯಿರಿಸಿದಳು । ಧರಣಿಸುರಯುಕ್ತಿಯಾಗಿಮಾಯಸೀತೆಯಗೊಂಡುಪುರ
ಕೆಪೋದನುಅಸುರನು॥೩೦॥ಮರುಗುತ್ತಬರುತಿರಲುಮರುತಜನುನೋಡುತ್ತ ।ತ
ರುಣಿನಂದನನೊಡನೆಪರಮಸಖ್ಯವಮಾಡಿ। ಧೊರೆವಾಲಿಯನುಕೊಂದುಹರಿಸೇನೆ
ವಡಗೊಂಡುಶರಧಿಸೇತುವನುಕಟ್ಟಿ॥ಧುರುಳರಾವಣನರಕ್ಕಸರನೆಲ್ಲರಕೊಂದು । ವ
ರಸೀಹಕಿಳತವಿಭೀಷಣಗೆವಲಿದಿತ್ತು । ಸರಸಿಜಾಕ್ಷಿಯಕರೆಸಿಯಜ್ಞೇಶನಲಿಪ್ರೊಗಿ
ಸೆಸತಿಗಳಬ್ಬರುಬಂದರು ॥೩೧॥ ಜಾನಕಿಯುಪೇಳಿದಳೆಯಿಾತರುಣಿಯನುಗ್ರಹಿ
ಸು । ಮಾನನಿಧಿಬಿಡಬೇಡವೆಂದುಬಿನ್ನೈಸಿದಳು । ನಾನೇಕಪತ್ನಿವ್ರತಕ್ಕೈಕೊಂಡು
ಯಿರುತಿಹೆನುಯಿಾವನಿತೆಕಲಿಯುಗದಲಿ ॥ ಮಾನವಾಧೀಶನಾಕಾಶರಾಯನಿಗೆಸುತೆ



9657

ಯಾಗ। ಧ್ಯಾನಿಸುತಲಿರಲಿತಿತುಪತಿಯಲ್ಲಿನೆಲಸುವೆನು । ನಾನೆಸಂಪ್ರೀತಿಯಲಿಪಡ
ಗೊಳ್ವೆಯಿಂದಭಯವಿತ್ತಕಾರಣದಿಂದಲಿ ॥೩೩॥ನೀನುಪ್ರೋಗುತವೇಗನೃಪನಮಂ
ದಿರಕೀಗ । ಯೇನಾದರುಂಮಾಡಿಮಾನಿನಿಯಸಂಘಟಿಸೆ । ಯೇನೇನಬೇಡಿದರುತಂ
ದೀಗಕೊಡುತಿರುವೆ । ಯೆಂದುಕಳುಹಿದಬಕುಳೆಯು॥ಧ್ಯಾನಿಸುತಮುರಹರನವೇಗ
ಬಂದಳುಪುರಕೆ । ಮಾನವೇಂದ್ರನರಾಣಿಧರಣಿದೇವಿಯಕಂಡು । ನೀನುಕೇಳಮ್ಮ
ಕನ್ಯಾರ್ಥದಿಂದಲಿಬಂದೆಶ್ರೀವೆಂಕಟೇಶನಿಂಗೆ॥೩೪॥ಅವನತಂದೆಯುತಾಯಿವಸುದೇ
ವದೇವಕಿಯು । ಅವನಕುಲಚಂದ್ರವಂಶವುಸಕಲದೇವರದೇವ । ನವನಿಗಿಹಸೆಂಟ
ರಗಣಿತವುಕೇಳಮ್ಮಅವನಮಹಿಮೆಯುಅಗಣಿತ॥ಅವನುವೇಂಕಟಗಿರಿಯೊಳಗೆತಾ
ನೆಲಸಿರುವ । ಅವನಿಗೆಯುನಿನ್ನಮಗಳನುಕರುಣಿಸಲುಬೇಕಮ್ಮ ।ಅವನಿಗೊಡಕ್ಷನ
ಮಂಮತ್ರಣವೆಂದುತಿಳಿಯಿಂದುಬೋಧಿಸಿದಳಾಬಕುಳೆಯು॥೩೫॥ ಇತ್ತಗೋವಿಂದ
ನೆನೆದನುವಂದುಕಾರ್ಯವನು । ಪೃಥ್ವಿಯೊಳುವಂದುಸಂಧಿಯುಸಲ್ಲದೆಂದೆನುತ । ಚಿ
ತ್ತಜನಪಿತನುಕೊರವಂಜಿರೂಪವತಾಳಬಂದುಕಣಿಯನುಪೇಳಿದ॥ ಮತ್ತೆಭಗವ
ನೆಪದ್ಮಾವತಿಯುವೇಂಕಟಗೆ । ಚಿತ್ತಸಂಭ್ರದಿಂದಕೊಡುಯೆಂದುಪೇಳುತ್ತ । ನಿತ್ಯ
ಸಂಪೂರ್ಣಬಂದನುತನ್ನಸ್ಥಾನಕ್ಕೆಬಕುಳೆಬಂದಳುಬೇಗದಿ ॥೩೬॥ ಕಾರ್ಯಕ್ಕೆಗೂ
ಡಿತ್ತೈಯೆಂದುಪೇಳುವವೇಳೆ । ಧಾರುಣೀಶನುಲಗ್ನಪತ್ರಿಕೆಯಕಳುಹಿದನು ।ಶೌರಿ
ನೋಡುತಸೂರ್ಯನಲ್ಲಿಪತ್ರಿಕೆಕಳುಹೆ । ಅಷ್ಟದಿಕ್ಪಾಲರೆಲ್ಲ ॥ ಗೌರಿಪತಿವಾಣೀಶ
ಯಿಂದ್ರಧನಪತಿವರುಣ । ಮಾರುತನುಅಗ್ನಿಯಮಸಹಿತಬಂದರುಬೇಗ । ವಾರಿ
ಜಾಂಬಕಿಲಕ್ಷ್ಮಿಯನುಕರಸಿದನುಸ್ವಾಮಿ ಪಾರವಿಲ್ಲದಹರುಷದಿ॥೩೭॥ಧನಪತಿಯುಕ
ರಸುತ್ತಬೇಕಾದಧನತರಿಸಿ । ವನಜಾಕ್ಷದೇವತಾವಸ್ತ್ರವನುನೆರೆರಚಿಸಿ । ಅ
ನುವಾಗಿಯಲ್ಲರನುಪ್ರೊರಡಿಸುತಸಂಭ್ರಮದಿಜನಪತಿಯಪುರಕೆಬೇಗ॥ ಒರಂಧೊ
ರೆನೋಡುತ್ತವರಪೂಜೆಯನುಮಾಡಿ । ವರರತ್ನಖಚಿತಬೀಡಾರಗಳವಲಿದಿತ್ತು ।
ಮರುದಿವಸನಾಂದಿಕಾಶೀಯಾತ್ರೆಮಾಡಿಸುತತರಳೆಯನುಕರದುತಂದು ॥ವರಗೋ
ತ್ರಪ್ರವರಮಂಗಳಾಷ್ಟಕವಪೇಳುತ್ತಾ । ಗುರುನಾರದರುಪೇಳಿಯರಸಿದರುಧಾ
ರೆಯನು । ಪರಮಪುರುಷನಿಗೆಪದ್ಮಾವತಿಯುಶೇರಿದಳು ಸುರರುಪ್ರೊಗಳುತನಿಂದ
ರು॥ ಪರಿಪರಿಯಬಳುವಳಿಯಮನದಣಿಯೆನಲಿದಿತ್ತು । ವರರತ್ನನೂರುಭಾರವನು
ಕಟವರ್ಪಿಸಿದ । ಧರಣಿಸುರರಿಗೆಮುತ್ತುರತ್ನಕನಕವಕೊಟ್ಟುಪ್ರಡುಗೆರೆಗಳಂನಿ
ತ್ತಜನಕೆ ॥೩೮॥ನಾಲ್ಕುದಿವಸವುಸಲ್ಲೆನಾಕಬಲಿರಚಿಸಿದನು । ಬೇಕಾದಪ್ರಡುಗೆರೆ
ಯಜನಗಳಿಗೆಕೊಟ್ಟನೃಪ । ಶ್ರೀಕಮಲಪತಿಯುತನ್ನರಸಿಯನುವಡಗೊಂಡುಪ
ರ್ವತಕೆಬಂದಸ್ವಾಮಿ ॥ ಏಕಚಿತ್ತದಭಕ್ತರಘುವಕೆಡಿಸುವೆನೆಂದು । ಲೋಕನಾಯಕ

Digitized by ROJA MUTHIAH RESEARCH LIBRARY

ಮಾಯಗೆಮಂದಿರವಮಾಡುಮನೆ । ಲೋಕದೊಳಗತಿಶಯದಿರಚಿಸಿದನುಮಂದಿರವ
ಶ್ರೀಕೃಷ್ಣಾಸಾಗರನಿಗೆ॥೪೦॥ಬ್ರಂಹದೇವನುಬಂದುಸ್ವಾಮಿಯದುರಿಲಿನಿಂದು। ನಮ್ಮ
ಸಲಹುವಸ್ವಾಮಿಕೇಳುಕಲಿಯುಗದಲ್ಲಿ। ಬ್ರಂಹೋತ್ಸವವುಕನ್ಯಮಾಸಶುದ್ಧ ದ
ಶಮಿದಿನದಿ ಮಾಡುವೆವ್ರಯಿಂದು ॥ ಬ್ರಂಹಾಂಡನಾಯಕನೆಕೈಕೊಳ್ಳಯಂದೆನುತ।
ನಿಮ್ಮರೂಪವಮಾಡಿಕೊಡುವೆಂದುಪೇಳಿದನು । ನಮ್ಮಭಕ್ತನೆಬ್ರಂಹಯಿಂದು
ಕೇಳ್ಳೆಯಂದುವಮ್ಮೆಪೇಳುವೆಮಾತನು॥೪೧॥ ಇಂದುನಿನ್ನಯಕೂಡೆಮಾತನಾಡಿದೆ
ಕೇಳು। ಮುಂದೆಕಲಿಯುಗಬಲಿತುಬಂದುದೈನೋಡೀಗ । ಮಂದಹಾಸದಿಮರ್ನದ
ಲಿಪೂಜೆಯನುಗೊಂಡು ಬೇಡಿದೊರಗಳಕೊಡುವೆನು ॥ಯಂದುಪೇಳುತಶ್ರೀಶನಿಂ
ದದೇವಾಲಯದಿ। ಛಂದದಿಂಕಾಸುಕಾಸಿಗೆಬಡ್ಡಿತರಿಸುವನು ।ಮಂದರೋದ್ಧರನು
ಕಾಣಿಕೆಕಪ್ಪತರಿಸುತ್ತ ಭಕ್ತರನುರಕ್ಷಿಸುವನು॥೪೨॥ಜನಕರಾಜೇಂದ್ರನಿಗೆಗುರು
ಶತಾನಂದನನು। ಮನುದಣಿಯೆಪೇಳ್ದಹರಿಕಥೆಯನಾಪೇಳಿದೆನು। ಘನವಾದಹರಿ
ಯಮಹಿಮೆಶೌನಕಾದಿಗಳಕುರಿತು ॥ ವನಜನಾಭನಭಕ್ತಸೂತಮುನಿಪೇಳಿದ
ನು । ಸಾನುರಾಗದಿಬ್ರಹ್ಮರುದ್ರಾದಿಗಳಗತಿಶಯವೆಂದು । ನಾನವರ್ಣಿಸಿದೆಹರಿ
ಮಹಿಮೆಮೂಲೋರ್ಕಕತಿಶಯಗಳು ।॥೪೩॥ಅರುಣಪ್ರದಯದಿಯದ್ದುನರರುಯಿಾ
ಕಥೆಪೇಳೆ, ದುರಿತದುರ್ಗತಿಗಳನುಕಳೆಯುವರುನಿಮಿಷದಲಿ । ಪರಿಪರಿಯಬೇಡಿ
ದಿಷ್ಟಾರ್ಥವನುಕರುಣಿಸುವ ಪರಪುತ್ರರನುಕೊಡುವನೂ॥ಕರುಣಿಯರಿಗೆಲ್ಲಸೌ
ಮಂಗಲವಸಂಪತ್ತು । ಶಿರಿಯುಭಾಗ್ಯವುಕೊಡುವದೇವದೇವಾಧೀಶ। ಚರಣಪದ
ವಿಯಕೊಡುವ ಚಂಪಕಾಪುರವಾಸತಿರುಪತಿಯವೇಂಕಟೇಶ॥೪೪॥ಮಂಗಳವುಮು
ರಹರಗೆ। ಮಂಗಳವುಶಿರಿಪತಿಗೆ । ಮಂಗಳವುವೈಕುಂಠದೊಡೆಯಶ್ರೀಹರಿಗೆ ॥
ಮಂಗಳವುಪದ್ಮಾವತಿಯವಲ್ಲಭಗೆ । ಜಯಮಂಗಳವುಶೇಷಾದ್ರಿವಾಸವೆಂಕಟೇಶ
ಗೆ ॥ ಜಯಮಂಗಳಂನಿತ್ಯಶುಭಮಂಗಳಂ॥

ಉದಯರಾಗ

ಗೋವಿಂದಾನಮ್ಮಗೋವಿಂದಾನಮ್ಮಗೋವಿಂದಾನಮ್ಮನಾರಾಯಣಾ । ಗೊ
ವರ್ಧನಗಿರಿಯನೆತ್ತಿದಗೋವಿಂದಾನಮ್ಮರಕ್ಷಿಸೊ ॥ಪ॥ ಪಡಲುಹಾಸಿಗೆ ಪಡಲುಅ
ಗ್ನಿಗೆಪಡಲುಬೆನ್ನಿಲಿಬಾರಳು ।ಕಡೆಯಯಮನರುಯೆಳೆದುಹೋಯ್ವಾಗ। ತೊಡಲಿ
ಬಿದ್ದುದುನಾಲಿಗೆ ಗೋವಿಂದಾ॥೧॥ಅರ್ಥವ್ಯಾರಿಗೆಪುತ್ರರ್ಯಾರಿಗೆ ಮಿತ್ರಬಾಂಧವ
ರ್ಯಾರಿಗೆ । ಕರ್ತುಯಮನರುಯಳೆದುಹೋಯ್ವಾಗಹೊತ್ತಿಬಿದ್ದದುನಾಲಿಗೆ ।ಗೋ
ವಿಂದಾನಮ್ಮ॥೨॥ ಮಂಚಬಾರದುಮಡದಿಬಾರದುಕಂಚುಕನ್ನಡಿಬಾರದು । ಸಂ
ಚಿತಾರ್ಥದದ್ರವ್ಯಬಾರದುಮುನ್ನಮಾಡಿದಧರ್ಮ್ಮವಾ। ಗೋವಿಂದಾನಮ್ಮ॥೩॥ಪ್ರಾ



ಣದೊಲ್ಲಭೆತನ್ನಪುರುಷನ ಕಾಣದೆನಿಲಲಾರಳು । ಪ್ರಾಣಪೋಗಲುಮುಟ್ಟಲೊಲ್ಲ
ಳುಪ್ರಾಣಕರಡರೆಬಾರಳು।ಗೋವಿಂದಾನಮ್ಮ॥೪॥ಧಿಟ್ಟತನದಲಿಪಟ್ಟಆಳುವೆಕಟ್ಟ
ಹೋಯ್ತುಪದವಿಯಾ ಮುಟ್ಟಭಜಿಸಿರೊ ವರಪುರಂದರವಿಠಲೇಶನಪಾದವಾ ॥೫॥

ಹಕ್ಕಿಚಿಲಿಪಿಲಿಯನ್ನಲೀ । ರಂಗಕಾಕಿಕಾಕಾಯನ್ನಲಿ ॥ಪ॥ ಯೆದ್ದುಮುಖ
ತೊಳಿಯೇಳು । ತಿದ್ದುಕಸ್ತೂರಿತಿಲಕ । ಮುದ್ದೆಬೆಂಣೆಯನಿನಗೆನಾನುಕೊಡುವೆ
ಹೊದ್ದಿದೆಕತ್ತಲುಬೆಳಕುಹರಿಯಲೊರಂಗ। ನಿದ್ರೆತಿಳಿದೆದ್ದುಕುಳ್ಳಿರುಸ್ವಾಮಿ
ಹಕ್ಕಿಚಿಲಿಪಿಲಿಯನ್ನಲಿ ॥೧॥ ಬಿಸಿಯದೋಸೆಯುಹೊಯ್ದು। ಮೊಸರುಗಡ್ಡೆಯ
ತೆಗದು । ಹಸನಾದಹಸುವಿನತುಪ್ಪವನ್ನು ॥ ಹಸನಾದಕಲಸನ್ನ ಹೆಸರುಬೇ
ಳೆಯಹುಗ್ಗಿ । ಹಸುಳೆನಿನಗಾರೋಗಣೆಗೆಕೃಷ್ಣ ॥ ಹಕ್ಕಿಚಿಲಿ ॥೨॥ ಎಂದುಯೆ
ಲ್ಲದಪ್ರೋರು ಯೆಂದ್ಯಾಕೆಮಾಡಿದೆಯೊ । ಕಂದರೊಳಗತಿಹುಟ್ಟಯಾದೆನೀನು
ಇಂದುಸೆರಳಿಗೆನಿನ್ನಯೆತ್ತಿಕೊಳ್ಳುವರಿಲ್ಲ । ಕಂದಅಳಬೇಡೈಯ್ಯಶ್ರೀಪುರಂದರ
ವಿಠ್ಠಲನೆ। ಹಕ್ಕಿಚಿಲಿಪಿಲಿಯನ್ನಲಿ ॥ ॥೩॥

ಉದಯರಾಗ

ಏಳೈಯ್ಯಪಾರ್ವತೀರಮಣಪಾವನಚರಣ । ಏಳೈಯ್ಯಫಣಿಕುಲಾಭರಣಪಾಪಕನ
ಯನ॥ಏಳೈಯ್ಯಬೆಳಗಾಯಿತು॥ಪ॥ ಕಮಲಸಂಭವಮುಖ್ಯವಿಮಲವಿಶ್ವಾಮಿತ್ರ।
ಜಮದಗ್ನಿಕಸ್ಯಪವಸಿಷ್ಠಕಣ್ವಾದಿಗಳು । ಸುಮನತತಿಬಂದುಕಾದಿಹರುಬಾಗಿಲೊ
ಳೀಗ। ಉಮೆಯರಸನೀನೊಲಿದುಪವಡಿಸದೆ ಹರನೆ ಏಳೈಯ್ಯ॥೧॥ಇಂದ್ರದಿಕ್ಪಾ
ಲರಂಕೂಡಿಯೆಂದೆಕಿಯೊಳಗೆ। ವಂದಿಸುತನಾರದನುವಲಿದುಗಾನವಮಾಡಿ । ನಂದಿ
ಭೃಂಗೀಶರುನಾಟ್ಯವಾಡುತಲಿಹರುಆನಂದದಿಂಪವಡಿಸದೆಹರನೆ ॥೨॥ ಗರುಡಗಂಧ
ರ್ವಕಿನ್ನರಯಕ್ಷಕಿಂಪುರುಷ । ಪರಮಪುರುಷರುನಿಮ್ಮಪಾದವೇಗತಿಯಂದು । ನಿ
ರುತದಿಂಬಂದುಓಲೈಸುತಿರುತಿಹರು ಹರನೇ ಏಳೈಯಬೆಳಗಾಯಿತು ॥೩॥

ಉದಯರಾಗ

ನಿನ್ನಮಗನಲೂಟೇಘನವಮ್ಮಾ। ನೀಕರದುಕೃಷ್ಣಗೆಬುದ್ಧಿಪೇಳೇಗೋಪ
ಮ್ಮಾ । ನಿನ್ನಮಗನಲೂಟೇಘನವಮ್ಮ ॥ಪಲ್ಲ॥ ಪಶುಗಾಳಕರುವಲ್ಲೀಪಾಲೀ
ಗೆಉಳಿವಿಲ್ಲಾ । ಶಿಶುಗಾಳಕೈಲಿದ್ದಬೆಣ್ಣೆಗೆವುಳುವಿಲ್ಲಾ । ಮೊಸರುಮಾರೂ
ವಲ್ಲಿಮಾರೀಹೊಕ್ಕಂದಾದಿ । ಶಶಿಮುಖಿಯರುದೂರಿಡುತಾರಮ್ಮಾ । ನಿನ್ನಮಗ
ನಲೂಟೇಘನವಮ್ಮ॥೧॥ ಮಲಗಿದ್ದಾಸತೀಯಾರಮೊಲೆಗಾಳತಾನುಂಬಾ । ಯೆಳೆ
ಯಕೂಸುಗಾಳುಯೆಣಗೊಡವಮ್ಮಾ । ವಳಗೆಯಿಾಲೂಟಯುಹೊರಗೆಅಲೂ
ಟೀಯು । ಘಳಿಲನೆಚ್ಚರಾಪಟ್ಟೆವುಕಾಣಗೋಪವಮ್ಮಾ । ನಿನ್ನಮಗನಲೂಟೇಘ

ROJA MUTHIAH RESEARCH LIBRARY

ನುವಮ್ಮ ॥೨॥ ಊರೊಳಾಗಿರಾಲೀಸವ್ರುಗುಬಿಟ್ಟೊಗಲೀಸ । ಮಾರೀಳಾಭುವನಕ್ಕೆವಡೆಯತಾನಂತೇ । ವಾರಿಜನಾಭಶ್ರೀಪುರಂಧರವಿಠಲಸೆಬೀದಿಯಬಸವನ ಮಾಡಿಬಿಟ್ಟೇಗೋಪಮ್ಮಾ । ನಿನ್ನಮಗನಲೂಟೀಘನವಮ್ಮಾ ॥೩॥

ಉದಯರಾಗ

ಯಾಕೆನಿರ್ದಯನಾದೆಯಲೊಹರಿಯೆ । ಶ್ರೀಕಾಂತಯನವಕ್ಯಲಿಯೆಳ್ಳಷ್ಟುದಯವಿಲ್ಲ ॥ಪ॥ ಶಿರಿಗೆಹೇಳದೆಹೋಗಿ ಶಿಲೆಯನುದ್ಧರಿಸಿದೆ । ಗರುಡನಮ್ಯಾಲೆನೀಗಮನವಾದೆ। ಭರದಿಂದಬಂದುನೀಕರಿಯನುದ್ಧರಿಸಿದೇ । ಕರಿರಾಜವರದನೆಂದೆನಿಸಿಕೊಂಡೆ ॥೧॥ ಕಂಗೆಟ್ಟುಕಲ್ಲಿಡಹಿಬೀಳುತೇಳತಬಂದೆ । ಹಿಂಗದೆಪ್ರಹ್ಲಾದನನು ನಪ್ಪಿಕೊಂಡೆ । ಮಂಗಳದಪದವಿತ್ತೆಭಕ್ತರನುಸಲಹಿದೆ । ಬಂಗಾರಕಿಷ್ಟುಕೊಟ್ಟರಾಹೇಳೊಹರಿಯೇ॥೨॥ಅಜಮಿಳನಾಅಣ್ಣನೇ ವಿಭೀಷಣನುತಮ್ಮನೇ । ರುಕುಮಾಂಗದನುನಿನ್ನಮೊಮ್ಮಗನೆ । ಅವರೆಲ್ಲಹಿತವರುನಾನಾನಿನಗಹಿತನೆ । ಅಖಿಳಾಂಕಮೂರ್ತಿಶ್ರೀಪುರಂದರವಿಠಲನೆ । ಯಾಕೆನಿರ್ದಯನಾದೆಯಲೊಹರಿಯೆ ॥

ಉದಯರಾಗ

ಹಳ್ಳಿಶೀಶಕುನಫಲವೆಲ್ಲನಮಗೆ । ಲಕುಮಿವಲ್ಲಭನಕೀವೆದೊರಕೊಂಬುದೆಲೆರಮಣೀ । ವಳ್ಳಿತೀಶಕುನಫಲವೆಲ್ಲನಮಗೆ ॥ಪ॥ ವಾಮಗರುಡನನೋಡುವಾಯಸವಫಲಗಳನು । ಕೋಮಲಾಂಗಿಯರೆರಡುಪೂರ್ಣಕುಂಭಾ । ಸಾಮಾನ್ಯವೇನವಿಲಂಬಲದಿಕ್ಷಣವಾಡುತಿದೆ । ಪ್ರೇಮದಿಂಮಧುರವಚನವಕೇಳರಮಣೀ । ವಳ್ಳಿತೀಶಕುನಫಲವೆಲ್ಲನಮಗೆ ॥೧॥ ಮೊಳಗುತಿದೆಭೇರಿದುಂದುಭಿಮಂಗಳದವಾದ್ಯ । ಸಲೆಪುಷ್ಪದಳಿಗಳದಿರಾಗುತಿದಕೋ । ಚೆಲುವಭಾರದ್ವಾಜವಿಹಗನೆಡನಾಡುತಿದೆ । ಗೌಳಿಬಲನಾಡುತಿದೆಕೇಳರಮಣೀ ॥೨॥ನೋಡುಮಿಬ್ಬರುಬ್ರಾಹ್ಮಣರುಯಮುರುಬರುತಿಹುದ । ಕೈಗೂಡುವದುಮನದಸಂಕಲ್ಪವೆಲ್ಲಾ । ಬೇಡಿದೊರಗಳನೀವಪುರಂದರವಿಠಲನ್ನ । ಕೂಡಿಸಂತಸದಿಂದಯಿರುವದೆಶಿರಮಣೀ ॥ ವಳ್ಳಿತೀಶಕುನಫಲವೆಲ್ಲನಮಗೆ ॥೩॥

ಉದಯರಾಗ—ಆಹೇರಿ—ಝಂಪೆತಾಳ.

ಶ್ರೀವೇಂಕಟೇಶಾಯನ್ನಮೋ । ಶ್ರೀವೇಂಕಟೇಶಾಯಶೇಷಾದ್ರಿವಾಸಾಯ ॥ಪ॥ ಶ್ರೀವೆಂಕಟೇಶಾಯ ಭೂಲಕ್ಷ್ಮಿಯಿಶಾಯ । ಶ್ರೀವೆಂಗಟೇಶಾಯಭಕ್ತಭವನಾಶಾಯ ॥ಅನು॥ ಪ್ರಳಯಕಾಲಡಮಿಳೆಯಮಳಗಿಜೀವರಾಗ । ಯೆಲೆಯಮಂಚದಮೇಲೆ । ಮಲಗಿರುವಕಾಲದೊಳು । ನುಳನಾಭಿಗೊಪ್ಪುತಿಹ ನಳನಪುಷ್ಪದಮೇಲೆಕಾಲಪುತ್ರತಾನುದಿಸಲು॥೧॥ ಸ್ಥಳವಕಾಣದೆಮನಬಳಲುತಿರೆ



ಮ್ಯೆದೋರಿ । ಚಲುವಕರ್ಣದೊಳರ್ದಮಲವಜಲಧಿಯೊಳಡಲು ॥ ಕುಲಗಿರಿಗೆಸೂರ್ಯಡಿಯಖಳರುಜನಿಸಿದರವರ । ಕೊಲೆಗೆಮನವನುತಂದೆದೇವಾ॥೨॥ಮಧುಕೈಟಭರುಬಂದುಯಿದಿರಾಂತುನಿಂತಿರಲು । ಉದಧಿಮಧ್ಯದಿನಿಂತುಕಾದಿದರುಹಲಕಾಲ ॥ ಚದುರತನದಲಿಖಳರುಮದವೇರಿಬೇಡೆನಲು । ವಧೆಗೆಸಿಲುಕುವವರವನು॥೩॥ಮುದದಿಂದಕೇಳದರೆಮನದೊಳಗೆಭಯಗೊಂಡು । ವುದಕವಿಲ್ಲದಸ್ಥಳದಿಸದೆಯನಲುಮೊಳಕಾಲ । ತುದಿಯನೇರಿಸಿಕೊಂಡುವುದರವನುಪಸರಿಸಿದ । ವುದಧಿವಾಸಾಯನ್ನಮೊ॥೪॥ಸರ್ವಾಧಿಕಾರವನು ನಿರ್ವಹಿಸಿಕಮಲಜಗೆ ।ಪೃಥ್ವಿಯನುಪಾಲಿಸುವಗರ್ವವನುನೀನಿತ್ತು ॥ ಪರ್ವತದಭಾರವನುನಿಜದಿಬೆನ್ನೊಳುತಾಳ್ದೆ । ಸರ್ವಸಾಕ್ಷಿಕನೆನಿಸಿದೆ॥೫॥ ಪೂರ್ವಪಾವನವಾಗಿಚೀರ್ಣಕರ್ಮಂಗಳನು । ಸರ್ವಾಣಯದೊಳುನೆಲಸಿಶೋರ್ಣಅಘರಾಸಿಗಳ ॥ ಚೀರ್ಣ್ವಿದುಕಡಿವುತ್ತಪರ್ವತಾಗ್ರದಿನಿಂತ । ಸರ್ವಾತ್ಮರೂಪಾಯನ್ನಮೊ॥೬॥ಆದುದೆಲ್ಲವುನಿನ್ನಪಾದಾಬ್ಜಕೇಶದೊಳು । ಆದಾರವಾಗಿರ್ದಮೇದಿನಿಯಹದಿನಾಲ್ಕು ॥ ಭೇದಗಳುವೇದಗಳುಆದಿತ್ಯಮೊದಲಾದಗ್ರಹತಾರೆನಕ್ಷತ್ರವು॥೭॥ಸಾಧುಶೌರ್ಯವುಕುಶಲಕ್ರೋಧತರವರ್ಣಗಳು । ಪಾದೋರುಮುಖಕಮಲಕರಮೂಲದೊಳುತೋರಿ ॥ ಮಾಧುರ್ಯದೊಳುಜಗಶುಭೋದಯಕೆಕೈಸಾರ್ದ । ವೇದಾಚಲಾಯನ್ನಮೊ॥೮॥ಸೃಷ್ಟಿಯಾಳುವಧೊರೆಗಳಷ್ಟದಿಕ್ಪಾಲಕರು ।ಅಷ್ಟವಸುಗಳುಚತುರ್ದಶರಾದಮನುಗಳುವ । ಸಿಷ್ಟಾದಿಸಪ್ತಋಷಿಗಳುಮುಖ್ಯಭೂಸುರರು । ಮೊದಲಾದನದಿನದಗಳು॥೯॥ ಕಷ್ಟಕರ್ಮಂಗಳನುಕಡಿದುಯಿಡಾಡುತಿಹ । ಯಿಷ್ಟನಾಗಿಹಪುಣ್ಯತರವೆಲ್ಲತೋರಿದುದು ॥ ಸೃಷ್ಟಿಸ್ಥಿತಿಸಂಹಾರಕರ್ತಕಾರಣನಾದ । ಚೆಟ್ಟುವಾಸಾಯನ್ನಮೊ ॥೧೦॥ಕೊಡನೊಳಗೆಅಡಗಿರ್ದಸಾಸಿವೆಯಹೊಲನೊಳಗೆ । ವೊಡಿದುಪಸರಿಸುವಂತೆಪೊಡವಿಯೊಳುಸೇರಿಸಿಯೆ ॥ ಕಡೆಯಭಾರವನೆಲ್ಲಕೈಕೊಂಡುಜಗದೊಳಗೆ । ಅಡಿಗಡಿಗೆಮ್ಯೆದೋರುತ॥೧೧॥ಪಡದಮಾತೆಯನುತರಬಿಡದೆಸಲಹುವತೆರದಿ ।ಪೊಡಗೊಂಡುವಿಶ್ವದೊಳುಮೃಡನಾಗಿಸಲಹಿದೆ॥ಪ್ರೌಡೆಯಮಾತಾಗಿರಿಯನೊಡೆಯಲ್ಲಿಅಡಿಯಿಟ್ಟ।ದೃಢನಿವಾಸಾಯನ್ನಮೊ। ಸಾಧುಸಜ್ಜನಪಾಲವೈರಿಗಳಸಹಮೂಲ। ಭೇದಿಸುವಗುಣಸೀಲವಾರುಧಿಯಮಧ್ಯದೊಳು ॥ ಆದಿಅಂತ್ಯವನೆಲ್ಲವುದರದೋಳುಕೈಕೊಂಡೆ। ವೇದಬಲ್ಲುದೆನಿನ್ನನು॥೧೩॥ ಓದಿನೋಡಲುನಿನ್ನಹಾದಿಹವನಾಗಿಹುದು । ಹೋದಹೊಲಬನುಕಾಣೆಭೇದಗಳುಕಾಣುತಿದೆ ॥ಪಾವಕಮಲದನೆಳಲುಸಾಧಿಸಮತನುಮನವ । ನಾದಿವಾಸಾಯನ್ನಮೊ ಅಣುಕ್ಷಣವ ಹದಾಪ್ರುಅಪರೂಪುಮೊದಲಾದ । ಯೆಣಿಸಲಾರದಜೀವರಾಶಿಗಳವಳಹೊರಗೆ॥ ಗುಣವಹೋರುತಆತ್ಮಚೈತನ್ಯನಾಗಿರ್ದು । ಕ್ಷಣಕೆಅಳಸುವನಗಿ

MUTHIAH RESEARCH LIBRARY

ಸುವ||೧೫|| ಮಣಿಕನಕಭವನಗಳಯಿತ್ತುಸೃಜಿಸುವೆಕೆಲವ | ಬಣಿತೆತಪ್ಪಿಸಿಮಾ
ಯಾಧಾರಬದ್ಧಗೆಯಿಂದ||ಕಾಣಿಸುವರೆದಣಿಸುವರೆಫಣಿಗಿರಿಯೊಳ್ನೆಲಸಿರ್ಪ | ಪ್ರ
ಣವರೂಪಾಯನ್ನವೊ||೧೬||ಸ್ನಾನಜಪತರ್ಪಣೆಯುಮಾನಸದಅರ್ಚನೆಯುಧ್ಯಾ
ನಧಾರಣೆಹೋಮಯಜ್ಞಾನಾಗ್ನಿಹೋತ್ರಗಳು | ಹೀನವಾಗದೆವಾಳ್ವಸರ್ವದಾನು
ಗಳೊಳುತಾನಾಗಿನೆಲಸಿಪ್ಪನು||೧೭||ಮೌನವಾಗಲುಮೂರುಗಾನಗಳುಬುಧರೊಳ
ಗೆ| ನಾನಾವತಾರವನುತಾಳಿಯುಗೆಯುಗದಲ್ಲಿ || ಹಾನಿಯನುಪರಿಹರಿಸಿಅನಾಥರ
ನುಸಲಹುತಿಹ| ಶ್ರೀನಿವಾಸಾಯನ್ನವೊ||೧೮||ಜಲಚರತ್ವವಧರಿಸಿಕುಲಗಿರಿಯ
ನುದ್ಧರಿಸಿ | ಹೊಲನೆಲನಸಂಚರಿಸಿಬಲುಮೃಗವರೂಪಾಗಿ || ನೆಲನನಾಕ್ರಮಿಸಿದು
ರ್ವಾಲತವರಸಂಹರಿಸಿ | ಜಲಧಿಬಂಧನವಾಗಲು||೧೯|| ಚೆಲುವರೂಪವಿಗೋಕಾ
ವನೀಸಲಹಿಬ | ತ್ತ್ಲೆಯಾಗಿವಾಜಿಯನುಕಲಿಯಕಾಲದಿಯೇರಿ|| ಕೊಲುವೆದುಷ್ಟ
ರಕುಲವಸಲವುಅವತಾರದೊಳೆ| ಚೆಲನಿವಾಸಾಯನ್ನವೊ||೨೦||ಉತ್ತಮಸ್ಥಾನ
ದೊಳುಪ್ರೊತ್ತಿಬಹನೃತ್ಯಗಳ | ಕಿತ್ತುಗಳೆವರೆಜಗದಕರ್ತನಾಗಿಯೆನಿಂದು | ಭೃ
ತ್ಯವತ್ಸಲನೆನಿಸಿದೈತ್ಯರನುಸಂಹರಿಸಿ | ಯೆತ್ತಿಕರವಭಯಕೊಡುತ ||೨೧||ಅರ್ಥಿ
ಯೊಳುಅಹಿರಾಜಸುತ್ತಿರ್ದಗಿರಿಯನ್ನು | ಹತ್ತಿರುವವಾರಾಹತಿಮ್ಮಪ್ಪನ್ನುತ್ತಿ
ರದಿ|| ನಿತ್ಯದೊಳುಪೈದೊರುನಿರ್ಮಲಾತ್ಮಕನಾದ | ಚಿತ್ತವಾಸಾಯನ್ನವೋ

## ಉದಯರಾಗ

ಯೇಳೈಯ್ಯಬೆಳಗಾಯಿತು| ಯೇಳುಲಕ್ಷ್ಮೀವರನೆಯೇಳುಭಕ್ತಪ್ರಿಯನೆ| ಯೇ
ಳೈಯ್ಯ ||ಪ|| ತೋಷದಿಂದಲಿಮತ್ಸ್ಯರೂಪವನುತಾಳುತ್ತ | ರೋಷದಿಂ ಸೋ
ಮಕನಹನನಗೈದು | ಶೇಷಶಯನನೆಸುರರಬೃಂದವನುಪೊರೆಯುತ್ತ | ದೋಷರ
ಹಿತನೆನಿಪ್ಪವಿಧಿಗೆಶ್ರುತಿಯಿತ್ತೆ||೧|| ಕಮಠರೂಪವತಾಳಿಪಾಲಕಡಲಲಿಮುದದಿ | ಕ
ಮಲಾಕ್ಷಮಂದರಾಚಲವಪೊತ್ತು | ಸುಮಶರನಜನಕನೇಸುರರಿಗಮೃತವನಿತ್ತು
ಸುಮನಸರುಕೂಡಿಪೊಗಳುತಿರಲು ||೨||ಪರಮಮಂಗಳಕರನೆಭುಜಗಜನಮಂದಾ
ರ| ವರಕೌಸ್ತುಭಾಭೂಷಣವಾಸುದೇವ | ಕರಿರೂಪವನುತಾಳಿ ಧರಣಿತಲವನು
ಪೊತ್ತೆ| ಕರಿವರದಸರಸಿಜಾಸನಜನಕನೆ||೩|| ಖರತರಹಿರಣ್ಯಕನ ಬಾಧೆಯಿಂದ
ಲಿಬಂದು | ಸುರರುಮೊರೆಯಿಡೆಕೇಳಸ್ತಂಭದಿಂದ | ತ್ವರಿತದಿಂದುದ್ಭವಿಸಿರಕ್ಕಸನ
ಸದೆಬಡಿದು | ಹರುಷದಿಂಪ್ರಲ್ಹಾದನನ್ನುಕಾಯ್ದೆ||ವಟುಪತ್ರಶಾಯಿನೀಕಶ್ಯಪಗೆ
ಸುತನೆನಿಸಿವಟುವಾಗಿಮೂರಡಿಯಭೂಮಿಯನ್ನು | ಕುಟಿಲತನದಿಂಬಲಿಯಬೇ
ಡುತ್ತಮೂಜಗವ | ಪಟುತರನೆವ್ಯಾಪಿಸುತಮೆರೆದೆ ||೫|| ಪತಿಗಹಿತರೇಣುಕಾದೇ
ವಿಬಸುರಲಿಜನಿಸಿ | ಕ್ಷಿತಿಯಭಾರವನಿಳುಹಲುದ್ಯೋಗಿಸುತಾ| ಕುತುಕದಿಂಕ್ಷತ್ರ


9657

ವೀರ್ಯಸುತನಗರ್ವವಮುರಿದು | ಅತಿಹರುಷದಿಂಜನರಪಾಲಿಸಿದೆದೇವ||೬|| ದಶರಥ
ನತನಯನೇತಾಟಕಾರಾತಿಯೆ | ಕುಶಿಕಸುತಮಖರಕ್ಷದನುಜಶಿಕ್ಷ | ನಿಶಿತಕಾ
ರ್ಮುಕಖಂಡನೋದ್ದಂಡಭುಜದಂಡಶಶಿವದನಧರಣಿಜಾಶ್ರೀಕಾಂತನೆ||೭|| ಪರಶುರಾ
ಮನಗರ್ವಭಂಗವನುವಿರಚಿಸುತ | ಮಾರಮಥನಸಾಕೇತಪುರವಶೇರಿ | ಪರಪಿತನ
ವಚನದಿಂದೀರೇಳುವರ್ಷಗಳು | ತ್ವರಿತದಿಂವಿಪಿನದೊಳ್ವಾಸಗೈದು||೮|| ಖರದೂ
ಷಣಪ್ರಮುಖರಾಕ್ಷಸರಸಂಹರಿಸಿ | ವರಗೃಧ್ರರಾಜನಿಗೆಗತಿಯನಿತ್ತು | ಧಾಣಿ
ಜಾತೆಯಕಾಣದೇದುಃಖಿಸುತಬಂದು | ಹರುಷದಿಂಶಬರಿಯನುಸಂತೈಸುತ || ಅರು
ಣಸುತಸಖನೆನಿಸಿರವಿಕುಲಾಂಬುಧಿಚಂದ್ರ | ಪುರುಹೂತಪುತ್ರನನುಹನನಗೈ
ದು | ಮಾರುತಸುತಮುಖದಿಂಜಾನಕಿಯನೆಲೆತಿಳಿದು | ಮೇರುನಗಧೀರನೆತೆರಳಿದೈ
ದೇವ||೧೦|| ವಾನರರಬಲಸಹಿತಸೇತುಮಾರ್ಗದಿಕಂಡುಮಾನನಿಧಿನೀದಾಟಲಂಕೆಯ
ಶೇರಿ| ದಾನವೇಶ್ವರನಾದರಾವಣನಸಂಹರಿಸಿ | ಮೌನಿಜನರನುಪೊರೆದೆರಾಜೀಂ
ದನೆ ||೧೧|| ಹರಿಸುತನಮುಖದಿಂದತರಿಸಿಟ್ಟಮೂಲಿಕೆಯಿಂ ತ್ವರಿತದಿಂಕಪಿಗಳ
ನುಬದುಕಿಸುತ್ತ |ಸ್ಥಿರವಾಗಿರಾವಣಾನುಜಗೆಪಟ್ಟಕಟ್ಟಿ | ಪರಿಪಿತನಿಗಭಿನಮಿ
ಸಿಸತಿಯಕೂಡಿ||೧೨|| ರಾರಾಜಿಸುವಪುಷ್ಪಕಾರೋಹಣವಗೈದುಮೂರುಲೋಕ
ದಜನರುಪೊಗಳುತಿರಲು|ಚಾರುತರಸಾಕೇತಪುರವನ್ನುಸೇರುತ್ತಧಾರಣಿಗೆಪಟ್ಟಾ
ಭಿಷಿಕ್ತನಾದೆ||೧೩|| ಕರುಣಾಸಮುದ್ರನೆಕಾಮಿತಫಲಪ್ರದನೆಕ್ಷೀರವಾರಿಧಿಶಯನಬ
ಲರಾಮನೆ | ವೀರತನದಿಂಕರದಿಲಾಂಗುಲವಪಿಡಿಯುತ್ತ | ಭೂರಿತೇಜನೆರೇವತೀ
ಕಾಂತನೆ||೧೪||ಭೂಮಿದೇವಿಯುದನುಜಬಾಧೆಯನುಸೈರಿಸದೆ | ಪ್ರೇಮದಿಂವಿಧಿಚ
ರಣಕಭಿನಮಿಸುತಾ | ಕಾಮಿತಾರ್ಥಪ್ರದನೆವನಜನಾಭನೆಸುತನೆ| ನೇಮದಿಂಪೊ
ರೆಯನ್ನಚತುರಾನನ||೧೫||ಯೆಂದನುಡಿಯನುಕೇಳಿಧರಣಿಯನುಸಂತೈಸಿ | ಯಿಂ
ದಾಪ್ರಿದೇವರ್ಕಳಿಂಕೂಡುತ | ಚಂದದಿಂಪಾಲ್ಕಡಲತೀರವನುಶೇರುತ್ತ | ನಿಂದು
ಶ್ರೀಹರಿಯನ್ನುನುತಿಗೈಯ್ಯಲು||೧೬||ಧರಣಿತಲಪಾಲನೆಧರ್ಮತತಿಮೂಲನೆ | ಸರ
ಸಗುಣಜಾಲನೇಕೋಮಲಾಂಗ | ತರಳವನಮಾಲನೆದರ್ಪಣಕಪೋಲನೆ| ಕರುಣಾಲ
ವಾಲನೆದೀನಪಾಲ||೧೭||ನಿರ್ಜರರನುಡಿಕೇಳಿಮನದಿತೋಷವತಾಳಿ | ಧೂರ್ಜಟಿಪ್ರಿ
ಯನಿತ್ರಶ್ರೀಕಾಂತನು|ದುರ್ಜನರಸಂಹರಿಸಿಜಗವಪಾಲಿಪೆನೆಂದು | ಗರ್ಜಿಸು
ತಕಣ್ಮರೆಯಾದನು|| ೮|| ವಸುದೇವದೇವಕಿಯ ಪರಿಣಯವಕೈಕೊಂಡು | ಬಿಸ
ಜಾಕ್ಷಿಯೊತಗೂಡಿತೆರಳುತಿರೆಪುರಕೆ | ವಸುಧೀಶಸುತಕಂಸಸಾರಥ್ಯವನುಮಾಡೆ
ಹಸನಾಗಿಯಶರೀರವಾಣಿನುಡಿಯೆ||೯||ಎಲೆಕಂಸದೇವಕಿಯಪರಯಂಟನೆಯಗರ್ಭ
ದಲಿಪುಟ್ಟುತಿಹಸುತನಹಸ್ತದಿಂದ | ನಿಳೆಯೊಳಗೆನೀನೀಗನಾಶನವಹೆನಿಜವೆ

ನಲು । ಖಳನುಡಿಯ ಕೇಳುತ್ತ ಖತಿಯತಾಳಿ ॥೧೧॥ ಅನುಜೆಯನು ಸಂಹರಿಪೆನೆನುತ
ಖಡ್ಗವಪಿಡಿಯೆ । ವಿನಯದಿಂ ವಸುದೇವನುಡಿದನಾಗ । ಮುನಿದು ಪೆಣ್ಗೊಲೆಯನ್ನು
ವಿರಚಿಪುದು ನೀತಿಯೆ । ಘನವಾದ ನೃಪಕುಲದಿ ನೀನು ಜನಿಸಿ ॥೧೨॥ ಇವಳ ಜಠರದಿ
ಜನಿಸುತಿರುವ ಸುತರನು ಬೇಗ । ತವಕದಿಂ ನಿನಗೆ ನಾನೊಪ್ಪಿಸುವೆನು । ಭುವಿಯೊ
ಳಗೆ ಕೊಲ್ಲುವದು ಮಾಣು ರಾಜೇಂದ್ರ ಭೂ । ಧವ ಬೇಡುವೆನು ಪೊರೆಯೊ ಕರುಣದಿಂ
ದ ॥೧೩॥ ಎಂದು ವಸುದೇವನಾಡಿದ ನುಡಿಗೆ ಕಂಸನಾ । ನಂದದಿಂ ಬೀಳ್ಕೊಟ್ಟು ಕಳು
ಹಿಸುರಕೆ । ಚಂದಿರಾನನೆ ಪಡೆಯೆ ಪುತ್ರರನು ವಸುದೇವ । ತಂದು ಕಂಸನಗಿತ್ತ ಧೈ
ರ್ಯದಿಂದ ॥೧೪॥ ನಾರದನ ಮುಖದಿಂದ ವೃತ್ತಾಂತವನು ತಿಳಿದು । ಕ್ರೂರತನದಿಂದವ
ರಶಿರೆಯೊಳಿಡಲು । ಕಾರಣಾತ್ಮಕನಾದ ಹರಿಯನ್ನು ಜಠರದೊಳ್ । ಸಾರಸಾಕ್ಷಿ
ಯು ಪೊತ್ತು ಮೆರೆಯುತಿರಲು ॥ ಯೋಗಮಾಯೆಯು ಕರದು ಪದ್ಮನಾಭನು ಭರದಿ । ನೀ
ಗೋಕುಲಕೆ ತೆರಳಿ ಸಂತಸದೊಳು । ರಾಗದಿಂ ಗೋಪಿಕಾದೇವಿ ಬಸುರೊಳಗೆ । ಬೇಗ
ದಿಂ ಜನಿಸೆಂದು ಕಳುಹೆ ಮುದದಿ ॥೧೫॥ ಹರಿಯಾಜ್ಞೆಯನು ಪಡೆದು ಯೋಗಮಾ
ಯಾದೇವಿ । ತೆರಳಿ ನಂದವ್ರಜಕೆ ನಿಂದು ಮೆರೆಯೆ । ಪರಮಾತ್ಮ ಮುರವೈರಿ ಸಂಭ್ರ
ಮದಿ ಹರಿ ಜನಿಸೆ । ಸುರರು ಪೂಮಳೆ ಕರೆಯೆ ಹರ್ಷವೆರದು ॥೧೬॥ ನೈಜರೂಪವ ತೋ
ರಿ ಕರುಣದಿಂ ದೇವಕಿಗೆ । ಭೋಜೇತಿ ಕಂಸನು ಹನನಗೈಯ್ಯೆ । ರಾಜಿಸುವ ಗೋಕು
ಲವ ಪೊಂದಿಸುತಯನ್ನನೀ । ಈ ಜಗದಿ ಸೌಖ್ಯವನ್ನನುಭವಿಸುತ ॥೧೭॥ ಎಂದು
ಹರಿನುಡಿಯೆ ಆನಂದದಿಂ ವಸುದೇವ ಚಂದದಿಂ ಸಂದಣಿಸಿ ವಿನಯದಿಂದ । ಕಂದನಂ ಕೈ
ಕೊಂಡು ಮೆಲ್ಲಮೆಲ್ಲನೆ ತೆರಳಿ । ನಂದಮಂದಿರವನ್ನು ಪೊಂದಿಸುತ್ತ ॥೧೮॥ ಪರಿಪರಿ
ಯ ಬಾಲಲೀಲೆಗಳನನುಭವಿಸುತ್ತ ॥ ಹರುಷದಿಂ ಮಧುರೆಯನು ಶೇರಿ ಜವದಿ । ದುರು
ಳ ಕಂಸನ ಕೊಂದು ಮಿತ್ರರಂ ಸಂತೈಸಿ । ನರಪಾಲರಂ ಕೂಡಿ ಮೆರೆಯೆ ಹರಿಯು ॥೧೯॥
ಅಷ್ಟಮಹಿಷಿಯರೊಡನೆ ಸಂಭ್ರಮದಿ ಕೂಡಿಸಂ । ತುಷ್ಟನಾಗುತ ದೇವದೇವ
ಹರಿಯೆ । ಕಷ್ಟವನು ಪರಿಹರಿಸು ಭಕ್ತಜನಮಂದಾರ । ಯಿಷ್ಟಾರ್ಥಗಳನಿತ್ತು
ಯನ್ನ ಸಲಹು ॥೨೦॥ ಕಲಿಯುಗಾಂತ್ಯದಿ ನೀನು ವಿಷ್ಣುಶರ್ಮನ ಗೃಹದಿ । ಸುಲಲಿತದಿ ಜ
ನಿಸುತ್ತ ಮ್ಲೇಂಛರನ್ನು । ಬಲುಹಿನಿಂದಲಿ ಜೈಸಿ ನಿರ್ಜರರ ಪೊರೆ ಶೌರಿ । ಜಲಜಾ
ಕ್ಷ ಮಹಿಮಾ ಯಾದವೇಂದ್ರ ॥೨೧॥ ಸಾರಸಾರಸನೇತ್ರ ನೀಲನೀರದಗಾತ್ರ । ವೈರಿ
ಕಾನನದಾತ್ರ ಪುಣ್ಯಚಾರಿತ್ರ । ಕ್ಷೀರವಾರಿಧಿಶಯನ ಸಮೌನಿಸನ್ನುತಚರಣ ।
ಘೋರದಾನವಹರಣ ಕೌಸ್ತುಭಾಭರಣ ॥೨೨॥ ಪರಮಮಂಗಳನಾಮ ಪಾಲಿತ ಸುರ
ಸ್ತೋಮ । ಕರಲಸಿತ ದರಚಕ್ರ ವರಪರಂಧಾಮ । ಧರಧರನೆ ಮಧುಹರನರವ್ಯಾತ
ಶವನಮಾಲ । ನಿರಶಯನ ಮಹಿಮನೇ ಭಕ್ತಪಾಲ ॥೨೩॥ ನಾರಾಯಣನಮೋ ।

Digitized by ROJA MUTHIAH RESEARCH LIBRARY



ಮಹಾಭಾರತದ–ಉದಯರಾಗ

ಭೂಪಾಳಿರಾಗ ॥ ಹರಿಯೆ ಕ್ಷೀರಸಾಗರಶಯನನೆ ॥ಪಲ್ಲ॥ ಧರಣಿಪ ಪರೀಕ್ಷಿತನ
ರಾಜಸುತನು ಜನಮೇಜಯನು । ಪರಮಋಷಿ ವೈಶಂಪಾಯಚರಣಕಭಿನಮಿಸಿ । ವ
ರಭಾರತದ ಕಥೆಯ ಪೇಳಬೇಕೆಂದೆನಲು । ಕರುಣದಿಂದಲಿ ನೋಡುತ ॥ಅ॥ ಶಿರಿಪತಿಯ
ಚರಣಸ್ಮರಣೆಯು ಮನದಿ ಮಾಡುತ್ತ । ಗುರುವ್ಯಾಸರನು ಸ್ಮರಿಸಿ ಭಕ್ತಿಯಿಂದಲಿ ಸ್ತು
ತಿಸಿ । ಧರೆಗೆ ಪಾವನವಾದ ಕಥೆಯ ಪೇಳುವೆನೆಂದು ಹರುಷದಲಿ ವರ್ಣಿಸಿದನು ॥೧॥ ದು
ರುಳರಕ್ಕಸರು ಕ್ಷತ್ರಿಯರೂಪದಿಂ ಜನಿಸಿ । ಪರಿಪರಿಯ ವರ್ಣಾಶ್ರಮಂಗಳನು ಕೆ
ಡಿಸುತ್ತ । ಧರೆಗೆ ಭಾರವು ಕೂಡಲು ಧರಣಿದೇವಿಯು ಬಂದು ಹರಿಗೆ ಬಿನ್ನೈಸಿದಳು ಬೇ
ಗ ॥ ಮುರಹರನು ಅಭಯವನು ಕೊಟ್ಟು ಯದುವಂಶದಲಿ । ತರುಣಿ ದೇವಕಿಯಲ್ಲಿ ಅ
ವತರಿಸಿದುಪ್ಪೆರನು । ತರಿದು ರಕ್ಷಿಸುತಿದ್ದ ಸಾಧುಸಜ್ಜನರನ್ನು ಪರಮಪುರುಷನು
ಕೃಷ್ಣನು ॥೨॥ ವಸುಧೆಯೊಳು ಕರಿಪುರದಿ ಶಶಿಯವರವಂಶದಲಿ । ವಸುಧೆಪತಿಗಳು
ಪುರೂರವ ನಹುಷ ದುಶ್ಯಂತ । ಹಸನಾಗಿ ಜನಿಸಿದರು ದುಶ್ಯಂತ ಧರಣಿಪಗೆ ವಸುಮತೀ
ಶನು ಶಂತನು । ಯಸವಸಂತೋಷದಲಿ ರಾಜ್ಯಭಾರವ ಮಾಡೆ । ಶಶಿಶೇಖರಗೆ ಜಟಾವಲ್ಲ
ಭೆಯು ಸತಿಯಾಗಿ । ಶಿಶುಗಳನು ಪಡದಳೆದರೊಳಗೆ ಭೀಷ್ಮನು ಪುಟ್ಟೆ ಮಾಯವಾದ
ಳು ಗಂಗೆಯು ॥೩॥ ಒಂದು ದಿನದಲಿ ಪರಾಶರ ಬಂದು ನೋಡಿದನು । ಸಿಂಧುದೇಶದಲಿರು
ವ ಮತ್ಸ್ಯಗಂಧಿಯು ಯೆಂಬ । ಮಂದಗಮನೆಯ ನೋಡಿ ಮಾರನಸ್ತ್ರಕೆ ಶಿಲುಕಿ ಗಂಗೆ
ಯನು ತಿಳಿಯೆ ಸತಿಯು ॥ ಚಂದ್ರತೇಜದಿ ಆಗ ರಮಿಸಿದನು ಮುನಿಪತಿಯು । ಚಂದ
ದಿಂ ಜನಿಸಿದನು ವೇದವ್ಯಾಸನು ಆಗ । ಯಿಂದುವದನೆಯು ಕಂಡು ಕೇಳದಿಳೆ ನಿಜಸುತ
ನೆ ಬಿಟ್ಟು ಪೋಪೆಯ ಯೆನ್ನನು ॥೪॥ ಜನನಿ ಕೇಳಮ್ಮ ನೀ ಮನದಿ ಸ್ಮರಿಸಿದ ಕ್ಷಣದಿ ।
ಅನುವಾಗಿ ನಾ ಬರುವೆಯೆಂದು ಪೇಳುತ ಮುನಿಯು । ಘನತಪಕೆ ಬದರಿಕಾಶ್ರಮಕೆ ಪೊ
ಕ್ಕ ವನಿತೆಯಿದ್ದಳು ಯಿತ್ತಲು ॥ ಜನಪ ಶಂತನು ಬಂದು ನೋಡಿದನು ಯಿಾಕೆಯನು ।
ಮನಸಿಜನ ಬಾಧೆಯೊಳು ಶಿಲುಕಿ ಕೇಳಲು ಸತಿಯು । ಸನುಮತವು ಯಿಲ್ಲವೆನ್ನುತ
ಪೇಳೆ ಧರಣಿಪನು । ಮನದ ದುಗಡದಿ ಪೊಕ್ಕನು ॥೫॥ ದುಗುಡವನು ಕೈಕೊಂಡ ತಂದೆ
ಯನು ನೋಡುತ್ತ । ಮಗನಾದ ಭೀಷ್ಮ ಬಂದೆರಗಿದನು ಚರಣದಲಿ । ದುಗುಡವ್ಯಾಕೈ
ತಂದೆ ವನಿತೆಯನು ತಹೆನೆಂದು ಭಾಷೆ ಮಾಡುತಲಿ ಬಂದು ॥ ಬಗೆಬಗೆಯ ನೀತಿಗಳ ಪೇಳಿ ಶ
ಪಥವ ಮಾಡಿ । ಮೃಗನೇತ್ರೆಯನು ತಂದು ನಿಜಪಿತಗೆ ಕೂಡಿಸಿದ । ಜಗಕೆ ಅತಿಶಯ
ಸುತನು ಪುಟ್ಟಿದನ ಧೀರ । ವಿಚಿತ್ರವೀರ್ಯನು ಯೆಂಬನು ॥೬॥ ತರಳನನು ನೋಡು
ತ್ತ ಧರಣಿಪನು ಸಂತಸದಿ । ಯಿರುತಿರಲು ವಂದು ದಿನ ಸುರರ ನಗರವ ಪಡಿಯೆ । ಕರು
ಣದಲಿ ರಕ್ಷಿಸಿದ ಭೀಷ್ಮಾಚಾರ್ಯನು ಸುತನ । ದಿನದಿನಕೆ ಬೆಳೆಯೆ ನೋಡಿ । ತರುಣಿಯ

ರಯಿಬ್ಬರನುಅಂಬೆಅಂಬಾಲಿಕೆಯ । ವರಿಸಿಮದುವೆಯಮಾಡಿ ಸಂತೋಷದಿಂದಿರ
ಲು । ಮರಣವಶದನುಕಾಲಗತಿಯಿಂವಿಚಿತ್ರವೀರ್ಯನೆಂಬರಸನಾಗ॥೭॥ಮಕ್ಕಳಿಳ
ಯಲುತಗುಣೆನೋಡಿಮನದಲಿಮರುಗಿ । ದುಖ್ಖದಲಿಪೇಳಿದಳುತನಯಭೀಷ್ಮನ
ಕುರಿತು । ವಕ್ಕಸವುಲಯಿತ್ತೆನ್ನಬಾಳುನೋಡೈಮಗನೆಮದುವೆಮಾಡಿಕೋಯನ್ನ
ಲು । ಅಕ್ಕತಂಗಿಯುಜನನಿಯರುಕೇಳುನೀನೀಗ । ವಿಕಾಕ್ಕದಮಾತನಾಡೆಂದೆನಲು
ವನಜಾಕ್ಷಿ । ಘಕ್ಕನೆಸ್ಮರಿಸಿದಳುವೇದವ್ಯಾಸಮುಖಿಬಂದುಕಂಡನುಮಾತೆಯ ॥
ನಿನ್ನಸೊಸೆಯರಕಳುಹುಯೆಂದುಪೇಳಲುಮುನಿಯು । ಕನ್ನೆಯರಕಳುಹಿದಳು
ಮುನಿಯತೇಜವನೋಡಿ । ಕಣ್ಣುಮುಚ್ಚಿದಳೊಬ್ಬಳುಗಡಗಡನೆನಡುಗೆಭಕ್ತಿ
ತಾಳಿದಳೊಬ್ಬಳು । ತನ್ನಮನದಲಿತಿಳಿದುಪೇಳಿದನುಮುನಿಪತಿಯು । ಕಣ್ಣುಕಾ
ಣದಲೊಬ್ಬಜನಿಸುವನುಅಂಧಕನು ।ಘನಪಾಂಡವನೆಂದುವಬ್ಬಳಲಿಜನಿಸುವನುಪ
ನ್ನಗಾರಿದ್ಧಜನೊಳ್॥೮॥ಭಕ್ತಿಯುಳ್ಳವನೊಬ್ಬಜನಿಸುವನುಕೇಳಮ್ಮ । ಸತ್ಯವಾ
ಕ್ಯವುಯೆಂದುಪೇಳಿತೆರಳಿದಮುನಿಪ । ಮತ್ತಕಾಶನಿಯರೊಳುಪುಟ್ಟಿದರುಮೂ
ರುಜನಸತ್ಯವ್ರತಸಂಪನ್ನರೂ । ಅರ್ಥಿಯಿಂದಲಿಪೆಸರನಿಟ್ಟುಪ್ರೀತಿಲಿಭೀಷ್ಮ ।
ಪೃಥ್ವೀಶಪಾಂಡುಧೃತರಾಷ್ಟ್ರವಿದುರನುಯೆಂದು ।ನಿತ್ಯಸಂತೋಷದಲಿಸಲಹು
ತಿದ್ದನುಯಿವರಮತ್ತೆಪೇಳುವೆಯೆಂದನು ॥೧೦॥ ಧರೆಯೊಳಗೆಕಾಂಭೋಜದೇಶದ
ರಸನಮಗಳ । ಅರಸಮುದ್ರಾಧಿಪನಪುತ್ರಿಯನುಸಹಿತಾಗಿ । ನರಸಿವೈವಾಹಿಕವ
ಮಾಡಿದರು ಪಾಂಡವಗೆತರುಣಿಯನುಗಾಂಧಾರಿಯಾ । ಹರುಷದಲಿಧೃತರಾಷ್ಟ್ರ
ನಿಗೆಮದುವೆಮಾಡಿದರು ।ಪರಮಹರುಷದಲಿಂದಯಿರುತಿರಲುವಂದುದಿನ।ಅರಸಪಾಂ
ಡವಸತಿಯರೊಡಗೂಡಿವನದಲ್ಲಿವುರುತರದಶಾಪಗೊಂಡು॥ತರುಣಿಯರವಡಗೊಂ
ಡುಗಿರಿಶತಶೃಂಗದಲಿ । ಪರಮತಪವನುಮಾಡುತಿರಲುಅತ್ತಲುವ್ಯಾಸ ।ಹರಿಣಾಕ್ಷಿ
ಗಾಂಧಾರಿದೇವಿಗುಪದೇಶವನುಕರುಣದಿಂದಲಿಮಾಡಿದ ॥ ವರಕುಮಾರಕರುಜನಿಸು
ವರೆಂದುಪೇಳುತ್ತ । ಪೊರಟುಮುನಿತಪಕಾಗಯಿವಾರ್ತೆಕೇಳಿದಳು । ತರುಣಿಕುಂ
ತೀದೇವಿತನ್ನಗಂಡಗೆಯೆರಗಿಮರುಗಿಬಿನ್ನೈಸೆನೀಗ ॥೧೨॥ವಲ್ಲಭನೆಕೇಳೆಂದುಬಲ್ಲಿ
ದನುದೂರ್ವಾಸ ।ವಳ್ಳೆಮಂತ್ರವುಯೆನಗೆವುಪದೇಶಮಾಡಿದನು । ನಲ್ಲನೀನಾಜ್ಞೆ
ಯನುಯೆನಗೆಕೊಟ್ಟರೆನಾನುಪಡೆದುಕೊಳ್ಳುವೆಮಕ್ಕಳ ॥ ವಲ್ಲಭೆಯೆಮಾತಕೇಳು
ತ್ತಪಾಂಡವರಾಯ ।ವಳ್ಳೆಕಾರ್ಯವುಆಯಿತ್ತುಹಾಗೆಯಾಗಲಿಯೆನಲು ।ಸಲ್ಲಲಿತದಿಂ
ದಕುಂತಿಯುಸ್ನಾನವನುಮಾಡಿಜಪಿಸಿದಳುಮಂತ್ರವನ್ನು॥೧೩॥ಬಂದುಪೇಳಿದಯ
ಮನುಕಂದನಾಗುವನೆಂದು । ಮಂದಗಮನೆಯುಕೇಳಿಮನದಿಹರ್ಷವತಾಳಿ । ಚಂ
ದದಿಂದಿರುತಿರಲುನವಮಾಸವನುಸಲ್ಲಿಯಿಂದುಮುಖಿಗರ್ಭದಲ್ಲಿ । ಚಂದ್ರತೇಜದಿ



ಜನಿಸಿದನುಧರ್ಮನಂದನನು । ಮಂದಹಾಸವಪಟ್ಟರೆಲ್ಲಋಷಿಗಳುಯೆಲ್ಲ । ವಂದುದಿ
ನದೊಳುಜಪಿಸಿದಳುವಾಯುವನುಭೀಮಪುಟ್ಟಿದಗರ್ಭದಿ ॥೧೪॥ ಕುಂತಿದೇವಿ
ಯುಬಸುರೊಳ್ಮಕ್ಕಳಾದುದಕೇಳಿ । ಚಿಂತೆತಾಳುತ್ತಗಾಂಧಾರಿದೇವಿಯುಆಗ ।
ಯೆಂತುಮುನಿಪನಮಂತ್ರಯೆಂದುಕುಹಕವಮಾಡಿ।ಗರ್ಭವನುಹೊಸಕೆಕ್ಷಣದಿ॥
ತುಂತುವಿನತೆರದಿನೂರೊಂದುಬೀಳಲುಗರ್ಭ । ಯಿಂತಕಾರ್ಯವುವುಂಟೆಯೆನುತ
ವ್ಯಾಸರುಬಂದು । ಹೊಂತಕಾರಿಗಳಾಗುವವರೆಂದುತೈಲದಲಿಯಿಡಿಸಲದುಶಿಶುಗಳಾ
ಯಿತ್ತು॥ಶಿಶುಗಳನುನೋಡುತ್ತಕುರುರಾಯದುಶ್ಶಾಸ । ಪೆಸರನಿಟ್ಟರುಯೆಲ್ಲಬೇರೆ
ಬೇರೊಂದಾಗಿ।ಶಶಿವದನೆಕುಂತಿದೇವಿಯುವಾರ್ತೆಕೇಳಿದಳುಶಚಿಪತಿಯುಜಪಿಸೆಕ್ಷಣ
ದಿ ॥ಕುಸುಮಾಕ್ಷಿನಿನ್ನಗರ್ಭದಿಲೋಕವಿಕ್ರಮನು ।ಹಸನಾಗಿಜನಿಸುವನುಯೆಂ
ದುಅಪ್ಪಣೆಕೊಡಲು । ವಸುಧೆಭಾರವನಿಳುಹುವದಕೆಹರಿಯುನರನಾಗಿಜನಿಸಿದನು
ಪಾರ್ಥನೆಂದು॥೧೫॥ಯೆನಗೆಮಕ್ಕಳುಸಾಕುಯೆಂದುಕುಂತಿಯುತಿಳಿದು ।ವನಿತೆಮಾ
ದ್ರಿಗೆಮಂತ್ರಉಪದೇಶಮಾಡಿದಳು । ಘನಮಂತ್ರವನುಜಪಿಸೆಜನಿಸಿದರುಯಿಕೆ
ಯಲಿನಕುಲಸಹದೇವರೆಂದು ॥ ತನಯರನುಕಾಣುತ್ತಪಾಂಡುರಾಯನುಮನದಿ ।
ಘನತೋಷವನುತಾಳಿಯಿರುತಿರಲುವಂದುದಿನ । ವನಿತೆಮಾದ್ರಿಯಕಂಡುರಮಿಸೆ
ಶಾಪದಿರಾಯಸುರರನಗರಿಗೆಸರಿದನು॥೧೬॥ ಮುನಿಗಳೆಲ್ಲರುನೋಡಿಕೃತ್ಯಗಳಮಾ
ಡಿಸುತ । ಘನವಾದಗಿರಿಯಲ್ಲಿಯಿವರಿರುವರಾವಲ್ಲ । ಯೆನುತಯೋಚನೆಮಾಡಿಕುಂ
ತಿಬಾಲರಸಹಿತವಡಗೊಂಡುಪುರಕೆ ॥ ಜನಪಭೀಷ್ಮನಬಳಿಯಬಿಟ್ಟುತೆರಳಿದರ
ವರು । ವನಿತೆಕುಂತಿಯಮಕ್ಕಳನುಸಹಿತನೋಡಿದನು । ಕನಕಭವನವಕೊಡಿಸಿ
ಸಲಹುತಿದ್ದನುಮುದದಿಂದುಜನಮಕ್ಕಳುಗಳ್॥೧೮॥ವೀರಪಾಂಡವರುಕೌರವರಿಂ
ಗೆಸಹಿತಲು । ಧಾರುಣೀಸುರರಾದದ್ರೋಣಕೃಪರಲಿವಿದ್ಯ । ಮೇರೆಯಿಲ್ಲದೆಯಲ್ಲಕ
ಲಿಸಿದರುತನಯರಿಗೆಧೀರಪಾರ್ಥನಕೇಳಲು ॥ ಧಾರುಣೀಪತಿದ್ರುಪದರಾಯನನುಕಳ
ತಂದು । ಪ್ರೇರಂತೆವಪ್ಪಿಸಿದಗುರುದಕ್ಷಿಣೆಯನೋಡಿ ।ಭೂರಿಹರುಷವಪಟ್ಟುಹರ
ಸಿದನು । ಫಲುಗುಣನಮಾರುತಾತ್ಮಜನಪ್ರೊಗಳೆ॥೧೯॥ದಿನದಿನಕೆವೈರತ್ವವನುಬೆಳ
ಯೆಆಟವಲಿ। ಕುಣಿಕುಣಿದುಯೆಲ್ಲರನುಬಡಿಯುತಿದ್ದನುಭೀಮ । ಘನವಾದಕ್ರೋ
ಧಪುಟ್ಟುತುಪೇಳಲೇಕಿನ್ನುವನಜನಾಭನಮಾಯೆಯು ॥ ದಿನವಂದುಯುಗವಾಗಿಕಳೆ
ಯುತಿರೆಮರುದಿವಸ । ಮುನಿಪವೇದವ್ಯಾಸಬಂದುಐರಾವತವನಜಾಕ್ಷಿಗಾಂಧಾರಿ
ದೇವಿಗುಪದೇಶಿಸಿದಕುಂತಿದೇವಿಯನುಕರಿಸೆ॥೨೦॥ಮರತುನೋಂತಳುವ್ರತವಹರಿ
ಣಾಕ್ಷಿಕೇಳಿದಳು । ಮರುಗಿದುಖ್ಖವತಾಳೆಸುರಪನಂದನಬಂದು । ಚರಣಕೆರಗುತ
ಮಾತೆಮನದದುಖ್ಖವತಿಳಿದುಪರಮರೋಷಾಗ್ನಿಯಿಂದ॥ಶರವಕೈಕೊಳುತಾಗಸು

Digitized by ... MUTHIAH RESEARCH LIBRARY

ರಲೋಕಕಿಡಲಾಕ್ಷಣದಿ । ಸುರಪತಿಯುಕಳುಹಿದನುಐರಾವತವಬೇಗ ।ಧರೆಗೆಅತಿ
ಶಯವಾಗೆವ್ರತವನ್ನೆಮಾಡಿದಳುಸುರರುಚೋದ್ಯವಪಟ್ಟರು॥೨೧॥ಕುರುರಾಯನಿ
ಧಕಂಡುಚಿಂತಿಸುತಶಕುನಿಯಂ । ಬರಸಿಕರ್ಣನಸಹಿತಸಭೆಮಾಡಿಯೋಚಿಸಿದ । ಅ
ರಸನಿಂಸದನವನುಮಾಡಿಸಿದವಾರಣಾವತಿಯೆಂಬನಗರದಲ್ಲಿ ॥ ವರವಿದುರಬದಲೊಂ
ದುದ್ವಾರವಮಾಡಿಸಿಪೋಗೆ । ದುರುಳದುರ್ಯೋಧನನುಧೃತರಾಷ್ಟ್ರನಿಗಪೇಳೆ । ಕ
ರದಸಿನುಪಾಂಡವರನಿವುಗಿರುವಸ್ಥಳವನ್ನುವಾರಣಾವತಿಯೆಂಯನಲು॥ ಚರಣಗೆರ
ಗುತನಡವರೈವರು । ಸ್ಥಿರಮುಹೂರ್ತದಿಸದನಪೊಕ್ಕಿರೆ । ಚರಪುರೋಚನಬಂ
ಧುವುನೆಗಗ್ನಿಯನುತಾತೋರೆತಿಳಿಯುತಲಿ ॥ ಶಿರದಿಪೊತ್ತನುಭೀಮಪುರುತರದ
ವನದಲ್ಲಿ । ಯಿರೆಹಿಡಂಬಕನತಾತರಿದುಅವನನುಜಯಾ । ದರಸಿಹಿಡಿಂಬಿಯುನರ
ವಿಸೆವಿಕ್ರಮತನಯುಜನಿಸಿದನುವೇಗದಲ್ಲಿ॥೨೨॥ಧರಣಿಸುರರಾಗಿಯೇಕಚಕ್ರಪು
ರವಲ್ಲಿ । ಯಿರುತಿರಲುಮುದುದಿನಬಕನಅಸುವನುಕೊಂದು । ಧರಣೀಶದ್ರುಪದರಾಯ
ನಪುರಿಗೆಬರುತಿರಲುಧುರದಿಗಂಧರ್ವಕನನು॥ ಉರಿಯಕೊಳ್ಳಿಯಬಿಟ್ಟುಜೈಸಿದ
ನುಕಲಿಪಾರ್ಥ ।ಪರಿಪರಿಯವಸ್ತ್ರಾಭರಣವನುತುಂದಿಡಲು । ಪರಮಸ್ನೇಹವಪಡ
ದುತೆರರಳದರುಮುಂದಕ್ಕೆದ್ರುಪದರಾಯನನಗರಕೆ॥೨೩॥ಶರವನ್ನುಜೈಸಿದ್ರುಪದಾ
ತ್ಮಜೆಯುವಡಗೂಡಿ ।ಶಿರಿಪತಿಯುಸಹಿತಬಂದರುಹಸ್ತಿನಾವತಿಗೆ । ಕುರುರಾಯತಿಳಿ
ದುಮನ್ನಿಸಿದಸ್ನೇಹಗಳಿಂದಹರುಷದಲಿಐದುವರುಷಾ॥ಯಿರುತಿರ್ದರತಿಸೌಖ್ಯದಿಂ
ದೆಲ್ಲರೊಂದಾಗಿ । ಮರಳಿರಾಷ್ಟ್ರವಹಂಚಿ ಯಿಂದ್ರಪ್ರಸ್ಥವಕೊಡಲು । ಸುರರ
ನಗರಿಯುಪೋಲ್ವಪುರದಿಐವರುನೃಪರುಧರೆಯಪಾಲಿಸುತಲಿರಲು॥೨೪॥ಸುರಮುನಿ
ಪನಿಂದನೀತಿಗಳನ್ನು ಕೇಳಿದರು । ಯಿರಳುಚೋರರುಬಾಧೆಪಸುಧೆಸುರರಿಗೆಳಗೆ
ಶರವಕೈಕೊಳುವದಕೆಪಾರ್ಥನಂತಗೃಹಕೆಪೊಕ್ಕುನೋಡಿದನುಅಲ್ಲಿ ॥ಅರಸಸತಿ
ಸಹಿತವಂದಾಗಿರಲು ಕಾಣುತ್ತ । ಹರಿಯಸ್ಮರಿಸುತಪೊರಟುಚೋರರನುಸಂಹರಿ
ಸಿ । ಧರಣಿಸುರರನುಸಲಹಿಪೊರಟನರ್ಜುನರಾಯ । ಧರೆಪ್ರದಕ್ಷಿಣೆಗೋಸುಗ ॥
ಯತಿರೂಪವನುತಾಳಿಪೊಕ್ಕದ್ವಾರಾವತಿಯ । ರತಿಪತಿಯಪಿತಕೃಷ್ಣಕಂಡುತಂಗಿ
ಯಕೊಟ್ಟನತಿಗಿಪುತಪತಾಳಿಪತಿಯನ್ನುವತಗೆಂತುಬಂದನಿಂದ್ರಪ್ರಸ್ಥಕೆ ॥
ಅತಿಶಯದಿಯಿರುತರ್ವರೆಲ್ಲರೊಂದಾಗಿ ತಾ । ಪತುಳವಿಕ್ರಮನುರಕ್ಷಿಸುತಿರ್ದಪಾಂ
ಡವರ । ಕ್ಷಿತಿಯೊಳಾವರನುಪೋಲ್ವಪುಣ್ಯಾತ್ಮರ್ಯಾರೈಯ್ಯಯಿಂದುಪೇಳದಮುನಿಪ
ನು॥೨೬॥ ಒಂದುದಿನಸುರಮುನಿಪಬರಲುನೋಡುತಲಿವರು । ವಂದಿಸುತಭಕ್ತಿಯಲಿ
ಕರಮುಗಿದುಪೊಗಳಿದರು।ಚಂದದಿಂರಾಜಸೂಯಕೆಅಪ್ಪಣೆಯಕೊಡಲುಮುಂದಹಾ
ಸ್ಯವತಾಳುತ್ತಾ॥ಕಂದರ್ಪನೈಯ್ಯವೊದಲಾದಭೂಭುಜರನ್ನೆ । ಯಿಂದುಮುಖಿಯ



ರಸಹಿತಕರಸಿದನುಯಲ್ಲರನು । ಕುಂದಣದಮನೆಗಳನುಕೊಡಸಿದನುಪ್ರೀತಿಯಲಿ
ಭೂಭುಜಜನಕೆಸಹಿತವಾಗಿ॥೨೮॥ಪರಮಸಂತೋಷದಲಿರಾಜಸೂಯವಮಾಡಿ ಶಿ
ರಿಪತಿಗೆಅಗ್ರಪೂಜೆಯಕೊಟ್ಟಧರಣಿಪನು । ವರರತ್ನದಾಸ್ಥಾನದಲ್ಲಿಕುಳ್ಳಿರಲಾ
ಗಕುರುಪತಿಯುಬಂದನಲ್ಲಿ॥ ಪರಿಪರಿಯಮಾನಭಂಗಗಳಾಗೆಕೌರವನು ।ಪರಮದು
ಗುಡದಲಿಂದಪುರವನ್ನುತಾಪೊಕ್ಕು। ಮರುಗಿಶಕುನಿಯಕಂಡುನೀತಿಪೇಳಲುಕ್ಷಣದಿ
ಕರಸಿದನುಪಾಂಡವರನು॥೨೯॥ಪಗಡೆಯಾಟವನಾಡಿಸರ್ವಶಿರಿಯನುಗ್ರಹಿಸಿ ।ಮೃಗನೇ
ತ್ರದ್ರೌಪದಿಯಶಿರಗಶೆಳೆಯಲುದೇವಿ।ನಗಧರನಪೊಗಳಿದಳುದೂರಕೇಳಿಪಕೃಷ್ಣ
ಅಗಣಿತೊಸ್ತ್ರವಕೊಟ್ಟನು ॥ ಜಗದೊಳದ್ಭುತವಾಯಿತ್ತುಹರಿಮಹಿಮೆಘನವೈ
ಯ್ಯ । ಪಗಡೆಯಾಡಿದರುಸರ್ವಸ್ವಶಿರಿಯನುಕೊಳಲು । ಖಗಮೃಗಗಳಿರುವವನ
ವಾಸವನೆಕೈಕೊಂಡುಸತಿಸಹಿತಪೊರಟರವರು ॥೩೦॥ ಬರುತಕಿರ್ಮ್ಮಾರನಸುವ
ನುಕೊಂಡುಕಾವ್ಯಕವನದಿ । ಯಿರುತಲಿರಲೊಂದುದಿನಶಿರಿಪತಿಯುತಾಬಂದು । ಅ
ರಸರೈವರನುಮನ್ನಿಸಿ ಕೃಷ್ಣತೆರಳಿದನುತನ್ನನಿಜಪುರಕೆಬೇಗ । ತರಣಿಅಕ್ಷಯ
ಪಾತ್ರಕೊಟ್ಟಅರ್ಜುನರಾಯಗರಗಳಕಂಡನಲಿಶರಗಳಪಡದುಸುರಪುರದಿ । ತರು
ಣಿಪೂರ್ವಶಿಯಲ್ಲಿಶಾಪವನುಕೈಕೊಂಡುಬಂದುಅಣ್ಣನಿಗೆನಮಿಸೆ ॥೩೧॥ ಕರಗಳಿಂದ
ಲಿಯಪ್ಪಿಮನ್ನಿಸಿದಅನುಜನನು । ವರುಷಹನ್ನೆರಡುಸಂದವುಕಾನನದವಾಸ । ಧ
ರಣಿಪತಿಯತಿಯಾದಮರುತಜನುಬಾಣಸಿಗ । ಸುರವಸುತಶಿಖಂಡಿಯಾದ ॥ ತು
ರುಗಗೋಪಾಲಗಾದರುಮಾದ್ರಿನಂದನರು । ತರುಣಿದ್ರುಪದಾತ್ಮಜೆಯುಸೈರಂಧ್ರಿ
ಯಾದಳಾ ।ಧೊರೆವಿರಾಟನಪುರಿಗೆಬಂದುಶೇರಿದರಿವರುಪಾಂಚಾಲನದೊಡ್ಡಿತೈಯ್ಯ ॥
ಪರಿಪರಿಯಶೇವೆಯೊಳ್ಯಿರಲೊಂದುದಿನದಲ್ಲಿ ।ದುರುಳಕೀಚಕಕಂಡುದ್ರೌಪದಿ
ಗೆಮನವಿಕ್ಕೆ। ಕೊರಳನುರಿದನುಭೀಮವಾರ್ತೆಕಳರುನೃಪಕೇಳಿತುರುಗಳನುಪಿಡಿದ
ನಾಗಾ॥ಸುರಪಸುತಮರುತಜನುಬಂದುಸೇನೆಯಪೊಕ್ಕು।ಶರಗಳಿಂದಲಿಸಮರಮಾ
ಡಿವೋಡಿಸೆಸೇನೆ । ತುರುಗಳನುಬಿಡಿಸಿಐವರುಸಹಿತನಿಜರೂಪದಿಂದಸಿಂಹಾಸನ
ಪರಿ।ಕುಳ್ಳಿರಲುಮತ್ಸ್ಯಭೂಪಾಲಕನುಸ್ತುತಿಸಿದನು। ಪುಲ್ಲಾಕ್ಷನನುಕರಸಿಯ
ಲ್ಲವನುಒಪ್ಪಿಸಿದ । ಬಲ್ಲಿದರುಯಿವರೆಂದುತನ್ನಮಗಳನುಕೊಟ್ಟಫಲುಗುಣನಸು
ತಗೆಮುದದೀ ॥ ಒಳ್ಳೆವಸ್ತ್ರಗಳಕೊಟ್ಟನುದಣಿಯೆಅಳಿಯನಿಗೆ । ಚೆಲ್ವಕೃಷ್ಣ
ನುಸಂಧಿಮಾಡಬೇಕೆಂದೆನುತ । ನಿಲ್ಲದೇಬಂದಕರಿಪುರಕೆವಿದುರನಮನೆಯಪೊಕ್ಕ
ದೇವಾಧೀಶನು॥೩೪॥ಸಂಧಿಮುರಿಯಲುದೇಷಬಂದುನೆರಹಿದಬಲವ । ಬಂದರೈಯಲ್ಲ
ನರಪತಿಗಳುಜನಗಳುಸಹಿತ । ಬಂದನೈಕೌರವನುತನ್ನಸೇನೆಯಗೊಂಡುಸಮ
ರಕನುವಾದರಲ್ಲಿ ॥ ಬಂಧುಬಳಗವ್ರಕಂಡುಫಲುಗುಣನುಕೈಗಂದೆ । ಶಿಂಧುಶಯನ

Digitized by ROJA MUTHIAH RESEARCH LIBRARY

ನುನೋಡಿನಿಜವನ್ನುಬೋಧಿಸಲು । ಬೆಂದುದೋಜಗವೆನಲುಸರಳತೀಡಿದಪಾರ್ಶ್ವ
ಕವನವಾಽರಂಭವಾಗೆ ॥೩೭॥ ಹತ್ತುದಿನಕಾದಿದರುಭೀಷ್ಮಪಾರ್ಥರುಸಹಿತ ।
ಮುತ್ತಯನುಶರಶಯನವನುತೊಟ್ಟುಶೌರ್ಯದಲಿ । ಕೃತ್ತಿಮಪದ್ವ್ಯೂಹದಲಿಅಭಿಮ
ನ್ಯುವನುಕೊಲ್ಲೆಚಿತ್ತದಲಿಖತಿಯುಗೊಂಡುಪಾರ್ಥ । ಕತ್ತರಿಸಿದನುಸೈಂಧವನತಲೆ
ಯುಸತ್ವದಲಿ । ಮತ್ತೇಭವನುಮುರಿದುಭಗದತ್ತನನುಕೆಡಹಿ । ಕತ್ತಲೆಯುಕವಿಸಿ
ದುಶ್ಯಾಸನನಮುರದಿಟ್ಟಪ್ರಳಯವಾಯಿತುಸಮರವು ॥ ಗುರುಗಳಲಿಐದುದಿನಕಾ
ದಿಸುರಲೋಕಕ್ಕೆ । ತೆರಳಸುತಸಮಸಪ್ತಕರಕೊಂಡುಕರ್ಣನೊಳು । ಪರಮವಿ
ಕ್ರಮದಿಂದಕಾದಿಶಿರವನುಕೆಡಹಿಶಲ್ಯನನುಮುರಿದುಮಿಡಲು ॥ ಕುರುರಾಯತಿಳಿದು
ಕೊಳವನುಪೊಗಲುಮರುತಜನನು ।ಪರಮಕೋಪವತಾಳಗದೆಯಿಂದಕೌರವನ ।
ತರಿದುಕೆಡಹಿದನೆಲ್ಲಸೇನೆಯನುಸಂಹರಿಸಿಧರಣಿಭಾರವಕಳೆದರು॥೩೮॥ಕುರುಕುಲ
ವನಿರ್ಮೂಲವನುಮಾಡಿಯಲ್ಲರಿಗೆ।ಮುರರಿಪುವಿನಾಜ್ಞೆಯಿಂದಲಿಕೃತ್ಯವನುಮಾಡಿ।
ಪರಮಶುಭಲಗ್ನದಲಿಪಟ್ಟಾಭಿಷೇಕವನುವಿರಚಿಸಿದರಾಸಂಭ್ರಮದಲಿ ॥ಹರುಷದಿಂ
ದಲಿರಾಜ್ಯವನುಮಾಡಿಧರ್ಮಜನು । ವರಮಹಾಕ್ರತುವನ್ನುರಚಿಸಿಜನಗಳನೆಲ್ಲ ।
ಪರಿಪರಿಯದಕ್ಷಿಣೆಗಳಲಿದಣಿಸಿದನು ಸತ್ಯವನುತಾಳಿಧರೆಯ ಪಾಲಿಸುತಿರ್ದನು ॥
ಅರ್ಥಿಯಿಂದಲಿರಾಜ್ಯವಾಳುತಿರಲಾಮ್ಯಾಳೆ । ಕೃತ್ತಿಮದಕಲಿಬರಲುಮುಸಲಪರ್ವದಿ
ಹರಿಯು । ಅತ್ತವೈಕುಂಠಕ್ಕೆಗಮಿಸೆನೋಡಿದರುಅರಸುಪಾಂಡವರೈವರು ॥
ಸತ್ವದಿಂಹಸ್ತಿನಾವತಿಯನಗರವನುತಾ । ವಿಸ್ತರಿಸಿಪಟ್ಟವನುಕಟ್ಟಸಿಪರೀಕ್ಷಿತ
ಗೆ। ಅತ್ಯಧಿಕಸ್ವರ್ಗರೋಹಣಕ್ಕೈದಿಮುರಹರನಪತ್ತಿನೊಳಗಿರುತಿರ್ದರೈ॥೩೯॥ಧ
ರೆಯೊಳಗೆವೈಕುಂಠಪುರವುತಿರುಪತಿಗಿರಿಯು । ಶಿರಿಪತಿಯುಸ್ಮರಿಸಿಕೇಳದನುವೈಶಂ
ಪಾಯ । ಅರಸಜನಮೇಜಯಗೆಪರಮಪುಣ್ಯದಕಥೆಯ ಧರೆಯಜನರುಗಳೆಲ್ಲ
ರು ॥ಅರುಣವುದಯದೊಳೆದ್ದುಪ್ರೋದಿಕೇಳುವನರರ । ದುರಿತಗಳಪರಿಹರಿಸಿಪರ
ಮಸಿರಿಯನುಕೊಟ್ಟು । ಪರಿಪರಿಯಬೇಡಿದಿಷ್ಟಾರ್ಥವನುಕರುಣಿಸುವ ವರಪು
ತ್ರರನ್ನುಕೊಡುವ ॥೪೦॥ ಶರಣಜನವತ್ಸಲನುಸುರಮುನಿಪವಂದಿತನು । ಗರುಡ
ವಾಹನಪುಂಡರೀಕಾಕ್ಷಕೇಶವನು । ತರಸಿಜಾಸನಪಿತನುಸನಕಾದಿಪೂಜಿತನ-ನ
ರಸಿಂಹನಾರಾಯಣ ॥ ಪರಮಪುರುಷಪರೇಶಹರಿಚಂಪಕಾಪುರದ । ಅರಸವೇಂ
ಕಟರಮಣಭಕ್ತರನುಪೊರೆಯುವನು । ಸ್ಥಿರಭಕ್ತಿಯಿಂದಯೀಕಥೆಕೇಳಪೇಳುವ
ರ ಉರಗಶಯನನುಕೃಷ್ಣನು । ಹರಿಯೇಕ್ಷೀರಸಾಗರಶಯನನೆ ॥೪೧॥

ಉದಯರಾಗ

ನಾರಾಯಣನಮೋ । ನಾರಾಯಣನಮೋ । ಪಾಹಿಮಾಂ ॥ಪ॥ ಶ್ರೀಶನೆಸುರನಿ



ಪರಾಮರ್ಶನ ಗ್ರಂಥ

ಕ । ರೇಶನೆನತಜನ । ಪೋಷನೆದಿತಿಜವಿ । ನಾಶನೆನಿತ್ಯದಿ । ಬೇಸರಿಲ್ಲದೆ । ನ್ಯಾ
ಶೆಯಸಲಿಸುವ । ರೇಶದೇವಲ । ಕ್ಷ್ಮೇಶಮುಕುಂದನೆ ॥೩೪॥ ಶೌರಿಘೋರಸಂಸಾ
ರಿಯೆಖಲಕಂ । ಸಾರಿಯೆಕರದರಧಾರಿಯೆಮುನಿಜನ । ವಾರವಿನುತಚರಣಾರವಿಂ
ದ । ಸುರವೈರಿಹನನಚರಣವಾರಜನಕನೆ ॥೩೫॥ ಮಂಗಳಂಶ್ರೀಚಕ್ರಧಾರಿಗೆ ।
ಮಂಗಳಂಗೋಪಿವಿಹಾರಿಗೆ । ಮಂಗಳಂಗೋಪಾಲಬಾಲಗೆ । ಮಂಗಳಂಕರುಣಾ
ಲವಾಲಗೆ । ಮಂಗಳಂತೆ ॥೩೬॥ ಮಂಗಳಂಶ್ರೀಯಾದವೇಂದ್ರಗೆ । ಮಂಗಳಂ
ಶ್ರೀರಾಮಚಂದ್ರಗೆ । ಮಂಗಳಂಭೂನಾಯಕಗೆ । ಮಂಗಳಂಶ್ರೀಶ್ಯಾಮವಿನು
ತಗೆ । ಮಂಗಳಂತೆ ॥ ॥೩೭

ಉದಯರಾಗ ಸಮಾಪ್ತ

Digitized by ROJA MUTHIAH RESEARCH LIBRARY

೨೪
ಸುನೋ
ಕವನವ
ಮುತ್ತ
ತ್ಯುವನ
ಯುಸತ
ದುಶ್ಯಾ
ಧಿಸುರ
ಕ್ರಿಮು
ಕೊಳವ
ತರಿಮ
ವನಿರೂ
ಪರಮ
ದಲಿಲಾ
ಪರಿಪ
ಅರ್ಥಿ
ಹರಿಯ
ಸತ್ವಧಿ
ಗೆ। ಅ
ರಿಯೊ
ಪಾಯ
ರು ॥ಅ
ಮಸಿರಿ
ತ್ರರನ
ವಾಹ
ರಸಿಂ
ಕಟರ
ರ ಉ
ನ್ನಾಪಾ

ದಿನಾಂಕ ಸೂಚಿ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮

ಸರಸ್ವತಿ ಭಂಡಾರ

ವಿ. ಸೂ: ೧೫ ದಿನಗಳಿಗಿಂತ ಹೆಚ್ಚುಕಾಲ ಯಾರು ಪುಸ್ತಕವನ್ನಿಟ್ಟುಕೊಳ್ಳಲಾಗದು.

| ಹಿಂದಿರುಗಿಸುವ ದಿನ | ಹಿಂದಿರುಗಿಸುವ ದಿನ |
| --- | --- |

ಕನ್ನಡ ಸಂಶೋಧನ ವಿಭಾಗ
ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ, ಬೆಂಗಳೂರು-೧೮

ಪುಸ್ತಕಸೂಚಿ
ವ. ಸಂ:
ಕ್ರ. ಸಂ: 1691.

ವ. ಸಂ:
ಕ್ರ. ಸಂ:

ಕ. ಸಾ. ಪ.
ಗ್ರಂಥ ಭಂಡಾರ

Digitized by ROJA MUTHIAH RESEARCH LIBRARY

ದಿನಾಂಕ ಸೂಚಿ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮

ಸರಸ್ವತಿ ಭಂಡಾರ

ವಿ. ಸೂ: ೧೫ ದಿನಗಳಿಗಿಂತ ಹೆಚ್ಚುಕಾಲ ಯಾರು ಪುಸ್ತಕವನ್ನಿಟ್ಟುಕೊಳ್ಳಲಾಗದು.

| ಹಿಂದಿರುಗಿಸುವ ದಿನ | ಹಿಂದಿರುಗಿಸುವ ದಿನ |
|---|---|

ಕನ್ನಡ ಸಂಶೋಧನ ವಿಭಾಗ
ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ, ಬೆಂಗಳೂರು-೧೮

ಪುಸ್ತಕಸೂಚಿ
ವ. ಸಂ:
ಕ್ರ. ಸಂ: 1691.

ವ. ಸಂ:
ಕ್ರ. ಸಂ:
ಕ. ಸಾ. ಪ.
ಗ್ರಂಥ ಭಂಡಾರ

Digitized by ROJA MUTHIAH RESEARCH LIBRARY

Digitized by ROJA MUTHIAH RESEARCH LIBRARY